

ಜನಪದ ವ್ಯಾಸ

ಬೆಟ್ಟದಬೀಡು ಸಿದ್ದಶೆಟ್ಟರು

ಡಾ. ಪಿ.ಕೆ. ರಾಜಶೇಖರ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೫೭

ಜನಪದ ವ್ಯಾಸ

ಬೆಟ್ಟದಬೀಡು ಸಿದ್ದಶೆಟ್ಟರು

ಡಾ. ಪಿ.ಕೆ. ರಾಜಶೇಖರ

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦ ೦೫೪

Janapada Vyaasa Bettadabeedu Siddashettaru-
A pen Portrait by **Dr.P.K.Rajasekhara,** Published by
Karnataka Janapada Parishat, #1, Jaladarshini Layout, Near
M.S. Ramaiah Hospital Main Gate, New BEL Road,
Bangalore - 560 054, Phone: 080-23605033.
Janapada Loka: 27201143

Pages: 40 Price: Rs.15/- Year: 2011

ಪ್ರಥಮ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : ೪೦
ಬೆಲೆ : ರೂ.೧೫/- (ಹದಿನೈದು ರೂಪಾಯಿಗಳು)

ಮುದ್ರಕರು: 'ವರ್ಣ ಸಲ್ಯೂಷನ್ಸ್', ನಂ.15/1ಬಿ, "ಲಕ್ಷ್ಮಿನಿವಾಸ",
14ನೇ ಅಡ್ಡರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10,
ದೂ: 080-42123547/48, E-mail: vernasolutions@gmail.com

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ.ಪಿ.ಕೆ.ರಾಜಶೇಖರ** ಅವರು **'ಜನಪದ ವ್ಯಾಸ ಬೆಟ್ಟದಬೀಡು ಸಿದ್ದಶೆಟ್ಟರು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧.೦೨.೨೦೧೧

ಜಿ.ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಲೇಖಕರ ಮಾತು

ದೊಡ್ಡ ಹುದ್ದೆಯಲ್ಲಿದ್ದ ದೊಡ್ಡಮನೆಯ ನಾಗೇಗೌಡರು ಮನಸ್ಸು ಮಾಡಿದ್ದರೆ ನಗರ ಜೀವನದ ಭೋಗಭಾಗ್ಯಗಳನ್ನೆಲ್ಲ ಅನುಭವಿಸಿ ಆನಂದ–ಆರಾಮಗಳಲ್ಲಿ ಕಾಲ ಕಳೆಯಬಹುದಿತ್ತು. ಆ ಎತ್ತರದಲ್ಲಿದ್ದರೂ ಅವರು ನೆಲದ ಸಂಸ್ಕೃತಿಗೆ ಹತ್ತಿರವೇ ಉಳಿದು ಜಾನಪದ ಲೋಕವನ್ನು ಸೃಷ್ಟಿಸಿದ್ದು ನಮ್ಮ ನಾಡು–ನುಡಿ–ಜನತೆಯ ಪುಣ್ಯವೇ ಸರಿ. ಜಾನಪದ ಲೋಕದ ರೂವಾರಿಯಾದ ಅವರು ನಮ್ಮ ಜಾನಪದ ಜಗದ್ಗುರು.

ಜಾನಪದ ಜಗದ್ಗುರು

ಜಾನಪದವನೆ ಧ್ಯಾನ ಮಾಡಿದ ಮಹಾಯೋಗಿ
ಜಾನಪದ ಲೋಕಕರ್ಪಿಸಿಕೊಂಡ ಕಡುತ್ಯಾಗಿ
ಗೌಡಾಳಿಕೆಯ ಗತ್ತು ಗಮ್ಮತ್ತೆ ಸಿರಿಗಂಧ
ಜಾನಪದ ಲೋಕ ಸೃಷ್ಟಿಯಲಿ ಪರಮಾನಂದ !
ದೊಡ್ಡಮನೆ ಪರಂಪರೆಯ ದೊಡ್ಡತನವನು ಮೆರೆದು
ದೊಡ್ಡ ಹುದ್ದೆಗಿಂತೆನಗೆ ಜಾನಪದವೆ ಹಿರಿದು
ಎನುತ ತನುಮನಧನಗಳನು ಧಾರೆಯೆರೆದು
ಮದ್ದಾನೆಯೊಲು ನುಗ್ಗಿ ಹೆದ್ದಾರಿಯನ್ನು ಸವೆದು
ಹೊನ್ನಾರು ಹೂಡಿ ಉತ್ತು ಬಿತ್ತು ಬೆಳೆ ತೆಗೆದಿರಿ
ಕಣಕೆ ಬಂದೆಲ್ಲರಿಗು ಮನತುಂಬಿ ನೀಡಿದಿರಿ.
ನಿಮ್ಮ ಕಾರ್ಯಕ್ಷೇತ್ರದಾ ಹರವು ಹೆಜ್ಜಾಲ
ನಿಮ್ಮವಿರತ ಶ್ರಮಕೆ ಬೆರಗಾಯ್ತು ಕಾಲ
ನೀವು ಕರುನಾಡ ಸಿರಿ ಜಾನಪದ ಜಗದ್ಗುರು
ನಿಮ್ಮ ಜಾನಪದ ಲೋಕ ನಮ್ಮೆಲ್ಲರ ತವರು!

ಮಹಾಶಕ್ತಿಯಾಗಿದ್ದ ಪೂಜ್ಯ ಶ್ರೀ ನಾಗೇಗೌಡರ ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ 'ಜನಪದ ಮಹಾಭಾರತ'ದ ಮಹಾಗಾಯಕನನ್ನು ಕುರಿತ ಈ ಪುಸ್ತಿಕೆಯು ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ ಹಾಗೂ ನನಗೆ ಸಂತಸವನ್ನುಂಟು ಮಾಡಿದೆ. ಇದಕ್ಕೆ ಕಾರಣರಾದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳಿಗೆ ಹಾಗೂ ಗ್ರಂಥ ಪ್ರಕಟಣಾ ಸಲಹಾ ಸಮಿತಿಯ ಎಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

–ಡಾ.ಪಿ.ಕೆ.ರಾಜಶೇಖರ

ಜನಪದ ವ್ಯಾಸ

ಬೆಟ್ಟದಬೀಡು ಸಿದ್ದಶೆಟ್ಟರು

ನಾನು ಕಂಡ ಜನಪದ ಗಾಯಕರುಗಳಲ್ಲಿ ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಆಕರ್ಷಿಸಿದ ಮಹಾನ್ ಕಲಾವಿದರೆಂದರೆ ನೀಲಗಾರ ಬೆಟ್ಟದಬೀಡು ಸಿದ್ದಶೆಟ್ಟಿಯವರು. ಅವರನ್ನು ಕಂಡ ಯಾರೊಬ್ಬರಿಗೂ ಅವರು ಕೇವಲ ಒಬ್ಬ ಜನಪದ ಗಾಯಕರಂತೆ ಕಾಣುತ್ತಿರಲಿಲ್ಲ; ಅವರೊಬ್ಬ ಮಹರ್ಷಿಯಂತೆ ಕಾಣುತ್ತಿದ್ದರು. ನಿಷ್ಕಪಟ ಹೃದಯದ, ನಿರ್ಮಲ ಮನಸ್ಸಿನ, ಮುಗ್ಧ ಸ್ವಭಾವದ, ಉದಾರ ಚರಿತರಾದ ಅವರ ಬದುಕು ಒಂದು ಪವಾಡ ಸದೃಶ ಕಥಾನಕ; ಬರಹಕ್ಕಿಳಿಯದೇ ಹೋದ ಒಂದು ಬೆರಗಿನ ಲೋಕ.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹೊರಳ್ಳಿಗ್ರಾಮದ ಗುಂಡುಮಾದಯ್ಯನವರು ಮಲೆಮಾದೇಶ್ವರ ಸ್ವಾಮಿಯ ಪರಮಭಕ್ತರು. ಅವರು ದೇವರ ಗುಡ್ಡರೂ ಆಗಿದ್ದರು. ಜೊತೆಗೆ ಕುಲಕಸುಬಾದ ಕುಂಬಾರವೃತ್ತಿಯಲ್ಲಿ ಸಂತೃಪ್ರ ಜೀವನವನ್ನು ಸಾಗಿಸುತ್ತಿದ್ದರು. ಅವರ ಸಹಧರ್ಮಿಣಿ ಸಿದ್ದಮ್ಮನವರಿಂದ ಅವರ ಬಾಳು ಹಾಲು-ಜೇನು ಬೆರೆತಂತೆ ಸುಮಧುರ ಸುಂದರವಾಗಿತ್ತು. ದುರ್ದೈವವೆಂದರೆ ಅವರಿಗೆ ಹುಟ್ಟಿದ ಮೂರು ಗಂಡು ಮಕ್ಕಳು, ಎರಡು ಹೆಣ್ಣುಮಕ್ಕಳು ಹುಟ್ಟುಹುಟ್ಟುತ್ತಿದ್ದಂತೆಯೇ ಸತ್ತುಹೋಗಿ ಹುತ್ತವನ್ನು ತುಂಬಬೇಕಾಗಿ ಬಂದು ಆ ದಂಪತಿಗಳು ಭರಿಸಲಾರದ ದುಃಖದಲ್ಲಿ ಕೊರಗುತ್ತಿದ್ದರು. ಸದಾ ಸಂಕಟದಿಂದ ನರಳುತ್ತಿದ್ದ ಅವರನ್ನು ಕಂಡ ಹಿತೈಷಿಯೊಬ್ಬರು ಚಿಕ್ಕಹಲಗೂರು ಸಿದ್ದಪ್ಪಾಜಿಗೆ ಹರಕೆ ಕಟ್ಟಿಕೊಳ್ಳುವಂತೆ ಹೇಳಿದರು. ಆಗ ಗುಂಡುಮಾದಯ್ಯ ದಂಪತಿಗಳು ಸಿದ್ದಪ್ಪಾಜಿಯನ್ನು ಮೊರೆಬಿದ್ದು ದೇವರಾಗಿ ಸ್ವೀಕರಿಸಿ, “ಸ್ವಾಮಿ ಸಿದ್ದಪ್ಪಾಜಿ, ನಮಗೆ ಒಬ್ಬ ಗಂಡು ಮಗ ಹುಟ್ಟಿ ಬದುಕ್ಕೊಂಡ್ರೆ ಅವ್ನಗ್ಗೆ ನಿನ್ನ ಹೆಸರನ್ನೇ ಕರೀತೀನಪ್ಪ” ಎಂದು

ಹರಕೆ ಕಟ್ಟಿಕೊಂಡರು.

ಈ ಸಲ ಅವರ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ಗುಂಡುಮಾದಯ್ಯನವರ ಹೆಂಡತಿ ಸಿದ್ದಮ್ಮ ಗರ್ಭಿಣಿಯಾದರು. ದಂಪತಿಗಳು ಕಂದನ ಬರುವಿಕೆಗಾಗಿ ಕಾತರಿಸಿ ಕಾದರು. ಹೇಳಲು ಅಸಾಧ್ಯವಾದ ಆನಂದ-ಆತಂಕಗಳಿಂದ ಅವರ ಹೃದಯ ಹೊಡೆದುಕೊಳ್ಳುತ್ತಿತ್ತು. ಸುದೈವವೆಂದರೆ ಈ ಸಲ ಹುಟ್ಟಿದ್ದು ಗಂಡು ಮಗು ಮಾತ್ರವಲ್ಲ ಅದು ಬದುಕುಳಿಯಿತು. ಇದರಿಂದ ಆ ದಂಪತಿಗಳ ಮನ ಬೆಳಗಿತು; ಮನೆ ತುಂಬಿತು, ಆನಂದ ಅರಳಿತು. ಕಟ್ಟಿಕೊಂಡ ಹರಕೆಯಂತೆ ಮಗುವಿಗೆ ಸಿದ್ದಯ್ಯಶೆಟ್ಟಿ ಎಂದೇ ಹೆಸರು ಕರೆದರು. ಸಿದ್ದಮ್ಮನವರ ಕಣ್ಗಾವಲಿನಲ್ಲಿ ಮಗುವಿಗೆ ಐದು ತಿಂಗಳು ತುಂಬಿತು.

ಅದು ದೀವಳಿಗೆ ತಿಂಗಳು. ಮಲೆಮಾದಪ್ಪನ ಸೇವೆಗೆಂದು ಗುಂಡುಮಾದಯ್ಯನವರು ಮಹದೇಶ್ವರನ ಬೆಟ್ಟಕ್ಕೆ ಹೋದರು. ಹಾಗೆ ಹೋದವರು ಮನೆಗೆ ಹಿಂದಿರುಗಲೇ ಇಲ್ಲ. ಅವರು ಮಾದಪ್ಪನ ದಿವ್ಯಸನ್ನಿಧಿಯಲ್ಲಿಯೇ ಕಾಲವಶರಾಗಿ ಹೋದರು. ಸುದ್ದಿ ತಿಳಿದ ಸಿದ್ದಮ್ಮ ನೆಲಮುಗಿಲು ಒಂದಾಗುವಂತೆ ತಲೆತಲೆ ಚಚ್ಚಿಕೊಂಡು ಗೋಳಾಡಿದಳು. ಬದುಕೇ ಬೇಡವೆನಿಸಿರುವಾಗ ಕರುಳು ಕತ್ತರಿಸುವಂತೆ ತೊಟ್ಟಿಲಿನಲ್ಲಿ ಅಳುತ್ತಿದ್ದ ಐದು ತಿಂಗಳ ಕಂದನಿಗಾಗಿ ಬದುಕಬೇಕೆಂಬ ಆಸೆ ಗರಿಗಟ್ಟಿತು. ಎದೆಯನ್ನು ತುಂಬಿಕೊಂಡಿದ್ದ ಅಳಲು ಕಣ್ಣೀರ ಕೋಡಿಯಾಗಿ ಹರಿಯಿತು. ತನ್ನ ಕಂದನಿಗಾಗಿ ಬದುಕುವುದು ಅನಿವಾರ್ಯವೆನಿಸಿದ ಸಿದ್ದಮ್ಮನಿಗೆ ಕಾಲಕ್ರಮದಲ್ಲಿ ಜೀವನ ಸಹ್ಯವಾಯಿತು.

ತತ್ವಪದಗಳನ್ನು ಹಾಡುತ್ತಿದ್ದ, ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದ, ಕಂಸಾಳೆ ಕುಟ್ಟುತ್ತ ಕಥೆಗಳನ್ನು ಮಾಡುತ್ತಿದ್ದ ಗುಂಡುಮಾದಯ್ಯನವರು ಇರುವವರೆಗೂ ಸಿದ್ದಮ್ಮನಿಗೆ ಸಮಸ್ಯೆಗಳೇ ಇರಲಿಲ್ಲ. ಗಂಡನನ್ನು ಕಳೆದುಕೊಂಡು ಹಸುಗೂಸನ್ನು ಎತ್ತಿಕೊಂಡು ಕೂಲಿನಾಲಿ ಮಾಡಿ

ಮಗುವನ್ನು ಸಾಕಿದ ಸಿದ್ದಮ್ಮ ಮಗನನ್ನು ಕೂಲಿಮಠಕ್ಕೆ ಕಳಿಸಿ ಎರಡನೇ ತರಗತಿಯವರೆಗೂ ಓದಿಸಿದರು. (ಅಲ್ಲಿ ಸಿಕ್ಕಿದ ವಿದ್ಯೆಯಿಂದ ೭೫ವರ್ಷ ವಯಸ್ಸಿನವರಾಗಿದ್ದಾಗಲೂ ಸಿದ್ದಶೆಟ್ಟರು ತಡವರಿಸಿಕೊಂಡು ಒಂದೊಂದೇ ಅಕ್ಷರ ಓದಿ ವಾಕ್ಯವನ್ನು ಪೂರ್ಣ ಮಾಡುತ್ತಿದ್ದರು).

ಸಿದ್ದಶೆಟ್ಟಿಯವರ ದೊಡ್ಡಪ್ಪನವರಾದ ದೊಡ್ಡಮಾದಯ್ಯನವರು ನೀಲಗಾರರು. ಅವರು ತತ್ವದ ಪದಗಳು, ಪುರಾಣ ಕಥೆಗಳು, ಭಜನೆ ಮುಂತಾದವನ್ನೆಲ್ಲ ಬಲ್ಲವರಾಗಿದ್ದರು. ದೊಡ್ಡಪ್ಪನವರು ತಂಬೂರಿ ಹಿಡಿದು ಹಾಡಲು ಕುಳಿತಾಗ ಅವರ ಹತ್ತಿರವೇ ಕುಳಿತು ಎಲ್ಲವನ್ನೂ ಗಮನಿಸುತ್ತಿದ್ದ ಬಾಲಕ ಸಿದ್ದಶೆಟ್ಟಿಯವರಿಗೆ ತಾನೂ ಅವರಂತೆ ತಂಬೂರಿ ನುಡಿಸುತ್ತ ಹಾಡಬೇಕೆಂಬ ಆಸೆ ಕುಡಿಯೊಡೆಯಿತು.

ಒಂದು ದಿನ ಉದ್ಭೂರಿನ ದೇವರಗುಡ್ಡ ಮಾದಪ್ಪಶೆಟ್ಟರು ಹೊರಳ್ಳಿಗ್ರಾಮಕ್ಕೆ ಬಂದು ದೊಡ್ಡಮಾದಯ್ಯನವರ ಜಗುಲಿಯಲ್ಲಿ ಕುಳಿತು ಕಥೆ ಮಾಡಿದರು. ಮಾದಪ್ಪಶೆಟ್ಟರ ಗಾಯನದ ಮೋಡಿಗೆ ಮರುಳಾದ ಬಾಲಕ ಸಿದ್ದಶೆಟ್ಟಿ ಅವರ ಕೈಯಿಂದ ಕಂಸಾಳೆಯನ್ನು ತೆಗೆದುಕೊಂಡು ನುಡಿಸಿ ಆನಂದಪಟ್ಟರು. ಹೊರಳ್ಳಿಯ ಎಲ್ಲ ಬೀದಿಗಳಲ್ಲೂ ಮಾದಪ್ಪಶೆಟ್ಟರ ಜೊತೆ ಸುತ್ತಿ ಅವರ ಶಿಷ್ಯರ ಜೊತೆಗೆ ತಮ್ಮ ದನಿಯನ್ನು ಸೇರಿಸಿದರು. ಸಿದ್ದಶೆಟ್ಟರ ಕಂಠಮಾಧುರ್ಯಕ್ಕೆ ಬೆರಗಾದ ಮಾದಪ್ಪಶೆಟ್ಟರು ತಾವು ಕಥೆ ಮಾಡುವಲ್ಲಿಗೆಲ್ಲ ಬಾ ಎಂದು ಕರೆದರು. ಸಿದ್ದಶೆಟ್ಟರಿಗೆ ಅರಸುತ್ತಿದ್ದ ಬಳ್ಳಿ ಕಾಲಿಗೆ ಸಿಕ್ಕಿಕೊಂಡಂತಾಗಿತ್ತು. ಆದರೆ ತಾಯಿ ಸಿದ್ದಮ್ಮನಿಗೆ ತಮ್ಮ ಮಗನನ್ನು ಕರೆದುಕೊಂಡು ಹೋಗಿ ಎಲ್ಲಿ ದೇವರಗುಡ್ಡನ ದೀಕ್ಷೆ ಕೊಡಿಸಿಬಿಡುತ್ತಾರೋ ಎಂಬ ದಿಗಿಲಿನಿಂದ ಮಗನಿಗೆ ಕಡಿವಾಣ ಹಾಕುವುದು ಅನಿವಾರ್ಯ ಎನಿಸಿತು. ನೀಲಗಾರನೇ ಆಗಬೇಕೆಂದು ತಾಗುಬಾಗಿನಲ್ಲಿ ನೀಲಗಾರದೀಕ್ಷೆ ಕೊಡಿಸಿದರು. ಆದರೆ ಸಿದ್ದಶೆಟ್ಟಿಯವರು ಶಾಸ್ತ್ರೋಕ್ತವಾಗಿ ನೀಲಗಾರರೇ ಆದರೂ ತಂದೆ ನಂಬಿದ್ದ ಮಾದೇಶ್ವರನ ದೇವರಗುಡ್ಡರ ಸಂಪ್ರದಾಯವನ್ನೂ ರೂಢಿಸಿಕೊಂಡರು. ಈ ಅವಳೀ

ಸಂಪ್ರದಾಯಗಳನ್ನು ತಮ್ಮವನ್ನಾಗಿಸಿಕೊಂಡದ್ದರಿಂದ ಮಂಟೇಸ್ವಾಮಿ ವಚನ ಹಾಗೂ ಮಾದೇಶ್ವರ ಕಥೆಗಳೆರಡನ್ನೂ ಕರತಲಾಮಲಕ ಮಾಡಿಕೊಂಡು ಸವ್ಯಸಾಚಿಯಂತಾದರು. ಅಲ್ಲದೆ, ಮಾದಪ್ಪಶೆಟ್ಟರ ಮೆಚ್ಚಿನ ಶಿಷ್ಯರಾಗಿ ಎಲ್ಲಾ ಕಾವ್ಯಗಳನ್ನೂ ತಮ್ಮ ಅಧೀನಕ್ಕೆ ತಂದುಕೊಂಡರು.

ಉದ್ಬೂರು ಮಾದಪ್ಪಶೆಟ್ಟರು ತಾವು ಕಥೆ ಮಾಡುತ್ತಿದ್ದಲ್ಲಿಗೆಲ್ಲ ಸಿದ್ದಶೆಟ್ಟರನ್ನು ಕರೆದುಕೊಂಡು ಹೋಗುತ್ತಿದ್ದುದು ಮಾತ್ರವಲ್ಲ, ಕೆಲವೊಮ್ಮೆ ಸಿದ್ದಶೆಟ್ಟರಿಗೇ ಕಥೆ ಮಾಡಲು ಅವಕಾಶ ಕಲ್ಪಿಸಿ ತಾವು ವಾದ್ಯ ಹಿಡಿದು ನುಡಿಸುತ್ತಿದ್ದರು. ಬಾಲಕ ಸಿದ್ದಶೆಟ್ಟರು ಕಥೆ ಮಾಡುವುದನ್ನು ಕೇಳುತ್ತಿದ್ದ ಜನರು, “ಮಾತಾಡುದ್ರೆ ಅರಗಿಣಿ; ಹಾಡುದ್ರೆ ಕೋಗಿಲೆ” ಎಂದು ಮೆಚ್ಚು ಮಾತಾಡುತ್ತ ಕೈ ತುಂಬ ಹಣ, ಜೋಳಿಗೆ ತುಂಬ ಅಕ್ಕಿ ಬೇಳೆಗಳನ್ನು ಕೊಡುತ್ತಿದ್ದರು. ಹೀಗೆ ಸಿದ್ದಶೆಟ್ಟರು ಗುರುವಿನ ಕರಕಮಲ ಸಂಜಾತರಾಗಿ ಗುರುವಿಗೆ ಲಾಭ ಕೀರ್ತಿ ಪ್ರತಿಷ್ಠೆಗಳನ್ನು ತಂದುಕೊಟ್ಟರು.

ಹೀಗಿರುವಾಗ ಮಾದಪ್ಪಶೆಟ್ಟರು ಕಾಲನ ಕೈಯಲ್ಲಿ ನರಳಿದರು. ದೈಹಿಕ ಶಕ್ತಿ ಕುಂದುತ್ತಾ ಬಂದಿತು. ಈಗ ಸಿದ್ದಶೆಟ್ಟರೆ ಗುರುವಿಗೆ ಆಧಾರವಾಗಿ ನಿಲ್ಲಬೇಕಾಯ್ತು. ಗುರುವಿನ ಶುಶ್ರೂಷಾಕಾರ್ಯದಲ್ಲಿ ನಿರತರಾದ ಶಿಷ್ಯ ಸಿದ್ದಶೆಟ್ಟರು ಹೊರಳ್ಳಿಯಲ್ಲಿ ತಮಗಾಗಿ ಒಂದು ಕರುಳು ಕೊರಗುತ್ತಿದೆ ಎಂಬುದನ್ನೇ ಮರೆತುಬಿಟ್ಟರು. ಮಗನನ್ನು ಕಾಣದೆ ನೊಂದ ತಾಯಿ ಅವರಿವರು ಕೊಟ್ಟ ಸುಳಿವಿನ ಮೇರೆಗೆ ಮಗನನ್ನು ಹುಡುಕಿಕೊಂಡು ಉದ್ಬೂರಿಗೆ ಬಂದರು. ಅನಾರೋಗ್ಯದಿಂದ ನರಳುತ್ತಿದ್ದ ಗುರುವನ್ನು ಬಿಟ್ಟು ಬರಲು ಮನಸ್ಸಿಲ್ಲದ ತಮ್ಮ ಸುಪುತ್ರ ಸಿದ್ದಶೆಟ್ಟಿಯವರನ್ನು ಹೊರಳ್ಳಿಗ್ರಾಮಕ್ಕೆ ಕರೆದುಕೊಂಡು ಬರಲು ತಾಯಿ ಹರಸಾಹಸ ಮಾಡಬೇಕಾಯ್ತು.

ತಾಯಿ ಸಿದ್ದಮ್ಮನವರು ಬಲವಂತವಾಗಿ ತಮ್ಮ ಮಗನನ್ನು ಕರೆದುಕೊಂಡು ಬಂದಿದ್ದರೂ ಸಿದ್ದಶೆಟ್ಟಿಯವರ ಮನಸ್ಸೆಲ್ಲ ಗುರುವನ್ನು ತುಂಬಿಕೊಂಡಿತ್ತು. ಜೀವಂತವಾಗಿರುವಾಗಲೆ ಗುರುದರ್ಶನ ಮಾಡಬೇಕೆಂದು ಚಂಡಿ ಹಿಡಿದ ಮಗನನ್ನು ಕಂಡ ತಾಯಿ ‘ನೀನೆ

ಹೋದಮ್ಯಾಲೆ ನಾನೊಬ್ಬಳೇ ಇದ್ದು ಇಲ್ಲೇನು ಮಾಡ್ಲಿ? ನಡಿ ನಾನೂ ಬತ್ತೀನಿ' ಎಂದು ಹೊರಟು ನಿಂತರು. ಆಗ ಸಿದ್ದಶೆಟ್ಟರ ದೊಡ್ಡಪ್ಪನವರಾದ ದೊಡ್ಡಮಾದಯ್ಯನವರು. 'ನೀವು ಹಿಂಗ್ಹೋದ್ರೆ ನಿಮ್ಮ ಜಮೀನ್ ಮಾಡೋರ್‍ಯಾರ?' ಎಂದು ಕೇಳಿದರು. ಅದಕ್ಕೆ ಸಿದ್ದಶೆಟ್ಟರು 'ದೊಡ್ಡಪ್ಪ, ನಾನು ಗೆಯ್ಯೋನಲ್ಲ ಗೆತ್ತೋನಲ್ಲ; ಕಥೆ ಮಾಡೋದೊಂದೇ ನನಗೆ ಗೊತ್ತಿರೋದು. ನಮ್ಮ ಜಮೀನ ನಿಮ್ಮ ಮಕ್ಕುಳ್ಗೆ ಕೊಟ್ಬುಡಿ' ಎಂದರು. ಅದಕ್ಕವರು 'ಸಿದ್ದಯ್ಯ ನೀನು ಮದುವೆ ಮುಂಜಿ ಆಗದೇ ಇರೋನು. ಈಗ ಹಿಂಗ್ಹೇಳ್ತಿ. ನೀನು ಮದ್ವೆಗಿದ್ವೆ ಆಗಿ ಮಕ್ಳುಮರಿ ಆದ್ರೆ ಅವರು ಸುಮ್ನೆ ಬುಡ್ತರ?' ಎಂದು ಕೇಳಿದರು. ಅದಕ್ಕೆ ಸಿದ್ದಶೆಟ್ಟರು 'ದೊಡ್ಡಪ್ಪ ನಿಮಗೆ ನಾನು ಬ್ಯಾರೆಯಲ್ಲ, ನಿನ್ನ ಮಕ್ಳು ಬ್ಯಾರೆಯಲ್ಲ. ನನಗೆ ನೀನು ಹೇಳುದಂಗೆ ಮದ್ವೆ ಇಲ್ಲ ಮುಂಜಿ ಇಲ್ಲ. ಅಂತೆ ಕಾಲುಕ್ಕೆ ನಾನು ಮದುವೆ ಆಗಿ ನನಗೆ ಮಕ್ಕಳಾದ್ರೆ, ಆ ಮಕ್ಕೇನಾರ ಬಂದು ನಮ್ಮಪ್ಪುನ ಆಸ್ತಿಯ ನಮುಗೆ ಕೊಡಿ ಅಂತೇನಾರ ಕೇಳುದ್ರೆ ಆಗ ನಿಮುಗೆ ಬಿಟ್ಟುಕೊಡಬೇಕು ಅನ್ನೋ ಪ್ರೀತಿ ಬಂದ್ರೆ, ನಿಮ್ಮ ಮಕ್ಕಳು ಇಷ್ಟಪಟ್ಟುದ್ದೇ ಆದ್ರೆ ಕೊಡಿ; ಇಲ್ಲದಿದ್ರೆ ಬ್ಯೇಡಿ' ಎಂದು ಹೇಳಿ ತಾಯಿಯನ್ನು ಕರೆದುಕೊಂಡು ಉದ್ದೂರಿಗೆ ಬಂದರು.

ಮಾದಪ್ಪಶೆಟ್ಟರ ಮೆಚ್ಚಿನ ಸಿಸುಮಗನಾಗಿದ್ದ ಸಿದ್ದಶೆಟ್ಟರು ಗುರುವಿನ ಅಂತ್ಯದವರೆಗೂ ಮನ ಮುಟ್ಟುವಂತೆ ಸೇವೆ ಮಾಡಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡರು.

ಸುಮಾರು ಹದಿನಾರು ವರ್ಷದ ಹುಡುಗನಾಗಿದ್ದ ಸಿದ್ದಶೆಟ್ಟರು ತಾವೊಬ್ಬರೇ ಕಥೆ ಮಾಡಿ ಸಂಪಾದಿಸಿ ತಂದುದ್ದರಿಂದ, ಇಲ್ಲವೆ ತಾಯಿ ಕೂಲಿನಾಲಿ ಮಾಡಿ ತಂದುದ್ದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಈ ಅವಧಿಯಲ್ಲಿ ಅವರು ಧರೆಗೆ ದೊಡ್ಡವರ ಕಥೆ, ಮಲೆಯ ಮಾದೇಶ್ವರನ ಕಥೆ, ಬಸವಪುರಾಣದ ಕಥೆ, ಚಾಮುಂಡಿ ಕಥೆ, ಪಿರಿಯಾಪಟ್ಟಣದ ವೀರಾಜನ ಕಥೆ, ಘನಪತಿರಾಜನ ಕಥೆ, ಬಂಜೆಹೊನ್ನಮ್ಮನ ಕಥೆ, ಬಾಲನಾಗಮ್ಮನ ಕಥೆ, ಚನ್ನಿಗರಾಮನ ಕಥೆ, ಮೈದಾಳರಾಮನ ಕಥೆಗಳನ್ನೆಲ್ಲ ಹಾಡುತ್ತಿದ್ದರು.

ಹೀಗಿರುವಾಗ ಒಂದು ಸಲ ಉದ್ದೂರಿಗೆ ಮಧೂನಹಳ್ಳಿ ನಂಜಪ್ಪ ಶೆಟ್ಟರು ಎಂಬ ಮಹಾಗಾಯಕ ಬಂದಿದ್ದರು. ನೆಂಟರ ಮನೆಯಲ್ಲಿ ಉಳಿದುಕೊಂಡಿದ್ದ ನಂಜಪ್ಪಶೆಟ್ಟರನ್ನು ಕಂಡು ಸಿದ್ದಶೆಟ್ಟರು ಜನ್ಮ ಜನ್ಮಾಂತರದ ಬಂಧುವನ್ನು ಕಂಡಂತೆ ದೀರ್ಘದಂಡ ನಮಸ್ಕಾರ ಮಾಡಿದರು. ಅನಿಮಿಷ ಯೋಗಿಯನ್ನು ಕಂಡ ಅಲ್ಲಮನಂತೆ ಆನಂದದಿಂದ ಪುಳಕಿತರಾದರು. ಅಂದೇ ನಂಜಪ್ಪಶೆಟ್ಟರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡು ಗುರುವಿನೊಡನೆ ನಾಡಿನ ನೂರಾರು ಊರುಗಳನ್ನು ತಿರುಗಿದರು. ಗುರುವಿನ ಗುಲಾಮನಾಗಿ ತಮ್ಮ ಗಾಯನ ಕಲೆಗೆ ಮೆರುಗಿನ ಸಿರಿಯನ್ನು ತಂದುಕೊಂಡರು. ರಾಮಾಯಣ, ಮಹಾಭಾರತ, ಎಲ್ಲಮ್ಮನ ಕಥೆ ಮುಂತಾದವುಗಳನ್ನು ಕಲಿತುದಲ್ಲದೆ ಅವರಲ್ಲಿದ್ದ ಗಾದೆ, ಒಗಟು, ತತ್ವದ ಪದ, ಜನಪದ ಲೆಕ್ಕಗಳು, ಪುರಾಣ ಕಥೆಗಳು, ಐತಿಹ್ಯಗಳು, ಹಸ್ಸದ ಕಥೆಗಳನ್ನೆಲ್ಲ ತಮ್ಮ ಕಣಜಕ್ಕೆ ತುಂಬಿಕೊಂಡರು. ಮೊದಲೇ ತಮಗೆ ಗೊತ್ತಿದ್ದ ಕಾವ್ಯಗಳ ಕೊರತೆಯನ್ನೆಲ್ಲ ನೀಗಿಸಿಕೊಂಡ ಸಿದ್ದಶೆಟ್ಟರು ಒಬ್ಬ ಮಹಾಕಲಾವಿದನಾಗಿ ಬೆಳೆದರು.

'ಗುರುಗಳ ಜೊತೆ ಹೋಯ್ತಿದ್ದಿ. ಹಗಲೆಲ್ಲ ಉಪಾದಾನ ಮಾಡ್ತಿದ್ದೊ. ರಾತ್ರೆ ಹೊತ್ತು ತಂಗಿತ್ತಾವು ನಾನು ಯಾವ ಕತೆ ಕೇಳುದ್ರೂ ಬೇಜಾರ ಮಾಡ್ಕೊಳ್ದೆ ಹೇಳ್ಕೊಡೋರು. ಅವ್ರು ಹೇಳ್ಕೊಟ್ಟಿದ್ದನೆಲ್ಲ ಹೊತ್ತಾರೆಗೆ ಹೇಳ್‌ಬುಡವ್ನಿ. ಉಪಾದಾನದಲ್ಲಿ ಬಂದುದನ್ನೆಲ್ಲ ಗುರುಗಳ್ಗೆ ಕೊಟ್‌ಬುಡುವ್ನಿ. ಅವ್ರು ಬರೀಕೈಲಿ ಮನೇಗ್ ಹೋಗ್‌ಬ್ಯಾಡ ಅಂತ ಹಿಪ್ಸ ಮಾಡಿಕೊಟ್ರೆ ಮನೇಗ್ ತರಿವ್ನಿ' ಎನ್ನುತ್ತಿದ್ದ ಸಿದ್ದಶೆಟ್ಟರು ತರುವಾಯದಲ್ಲೂ ತಮ್ಮ ಜೊತೆಗೆ ಕಥೆ ಮಾಡಲು ಬರುತ್ತಿದ್ದವರಿಗೆ ಬಂದುದನ್ನೆಲ್ಲ ಹಂಚಿ ಬರಿಗೈಲಿ ಮನೆಗೆ ಬರುವುದು ಸರ್ವೇಸಾಮಾನ್ಯವಾಯ್ತು. ಇದನ್ನು ತಿಳಿದಿದ್ದ ತಾಯಿ ಕೂಲಿ ಮಾಡಿ ತಂದು ಮಗನಿಗೆ ತುತ್ತು ತಿನ್ನಿಸಿ ಬೆಳೆಸಿದರು.

ಸಿದ್ದಮ್ಮನವರಿಗೆ ಸಿದ್ದಶೆಟ್ಟಿ, ಸಿದ್ದಶೆಟ್ಟಿಯವರಿಗೆ ಸಿದ್ದಮ್ಮನವರಲ್ಲದೆ ಈ ಪ್ರಪಂಚದಲ್ಲಿ ಬೇರೆ ಯಾರು ತಾನೆ ಇದ್ದರು? ಹೀಗೆ ತಾಯಿ-ಮಗ ಒಟ್ಟಿಗೆ ಇರುವುದೂ ಆ ದುರ್ವಿಧಿಗೆ ಹಿಡಿಸಲಿಲ್ಲವೆಂದು ಕಾಣುತ್ತದೆ.

ಸಿದ್ದಶೆಟ್ಟಿಯವರಿಗೆ ತನ್ನ ತಾಯಿಯನ್ನು ಉಳಿಸಿಕೊಳ್ಳುವ ಭಾಗ್ಯ ಬಹಳ ಕಾಲ ಉಳಿಯಲಿಲ್ಲ. ಸಿದ್ದಶೆಟ್ಟಿಯವರು ಒಂಟಿಯಾದರು. ಏನು ಮಾಡಬೇಕೆಂಬುದೇ ತೋಚದಂತಾಗಿ ಚಿಂತಿಸುತ್ತ ಕುಳಿತಿದ್ದಾಗ ತಂಬೂರಿ ತಂತಿಯ ನಾದ ತಾಯಿಯ ದನಿಯಾಗಿ ತಂಪರೆಯಿತು. ಕಂಸಾಳೆಯ ಖಣಿಲುಖಣಿಲು ನಾದ ಕೂಗಿ ಕೈಹಿಡಿದು ಎತ್ತಿಕೊಂಡಿತು. ಕಣ್ಣುಮುಚ್ಚಿ ಮೂಕರಾಗಿ ಕುಳಿತಿದ್ದ ಸಿದ್ದಶೆಟ್ಟರು ಬೆಚ್ಚಿ ಕಣ್ತೆರೆದರು. ಶಿಷ್ಯ ಸಮೂಹ ಸುತ್ತುವರಿದಿತ್ತು. ಶೆಟ್ಟರ ಕಣ್ಣುಗಳಿಂದ ಧಾರಾಕಾರವಾಗಿ ಕಂಬನಿ ಸುರಿಯುತ್ತಿತ್ತು. ಜೊತೆಗಾರರೂ ಬಿಕ್ಕುತ್ತಿರುವುದನ್ನು ಕಂಡ ಸಿದ್ದಶೆಟ್ಟರು ಥಟ್ಟನೆ ಧೈರ್ಯ ತಂದುಕೊಂಡು ಆ ಕೂಡಲೆ ಜೊತೆಗಾರರನ್ನು ಕೂಡಿಕೊಂಡು ಊರೂರುಗಳ ಮೇಲೆ ಉಪಾದಾನಕ್ಕೆಂದು ಹೊರಟೇಬಿಟ್ಟರು.

ಸಿದ್ದಶೆಟ್ಟರು ಜೊತೆಗಾರರೊಡನೆ ಮೈಸೂರು, ಮಂಡ್ಯ, ಕೊಡಗು ಜಿಲ್ಲೆಗಳಲ್ಲೆಲ್ಲ ತಿರುಗಿ, ಬಯಸಿದವರೆದುರು ಕಥೆ ಮಾಡಿ ಸೈ ಎನಿಸಿಕೊಂಡರು. ಅದು ಬೆಳ್ಳಿ ರೂಪಾಯಿ ಕಾಲ. ದಿನಕ್ಕೆ ೨೦ ರಿಂದ ೪೦ ಬೆಳ್ಳಿ ರೂಪಾಯಿಗಳು ಬರುತ್ತಿದ್ದವಂತೆ. ಶಿಷ್ಯವತ್ಸಲರಾದ ಸಿದ್ದಶೆಟ್ಟರು, ವಿಕೇಂದ್ರೀಕರಣದ ಹರಿಕಾರರಂತೆ ಎಲ್ಲರಿಗೂ ವಿತರಿಸಿ ಹೊಟ್ಟೆಪಾಡಿಗೆ ಎಷ್ಟು ಬೇಕೊ ಅಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಹೀಗೆ ಊರಾಡುತ್ತಿರುವಾಗ ಒಂದು ಸಲ ಅವರ ತಂಡ ಮೈಸೂರಿಗೆ ಸಮೀಪದಲ್ಲಿರುವ, ಆದರೆ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿರುವ ಬೆಟ್ಟದಬೀಡು ಗ್ರಾಮದಲ್ಲಿ ಕಥೆ ಮಾಡಿದರು. ಆ ಊರಿನ ಹಿರೀಕರು ಸಿದ್ದಶೆಟ್ಟಿಯವರ ಕಥನಕಲೆ, ಪುರಾಣ ಪ್ರಜ್ಞೆ, ಗಾಯನಕೌಶಲಗಳನ್ನೆಲ್ಲ ಮೆಚ್ಚಿ ವಾರಗಟ್ಟಲೆ ತಮ್ಮ ಊರಿನಲ್ಲಿ ಉಳಿಸಿಕೊಂಡ್ಲು ಒಂದೊಂದು ದಿನ ಒಬ್ಬೊಬ್ಬರ ಮನೆಯವರು ಕಥೆ ಮಾಡಿಸುವ ವ್ಯವಸ್ಥೆ ಮಾಡಿದರು. ಒಕ್ಕಲಿಗರೇ ಹೆಚ್ಚಾಗಿರುವ ಆ ಊರಿನ ಪಟೇಲ್ ನೀಲೇಗೌಡರು, ಪುಟ್ಟೇಗೌಡರು, ಸಿದ್ದೇಗೌಡರು ಸಿದ್ದಶೆಟ್ಟಿಯವರ ನಡೆನುಡಿಗಳನ್ನೆಲ್ಲ ಮೆಚ್ಚಿಕೊಂಡು 'ಆಗಾಗ ನಮ್ಮೂರಿಗೆ ಬರ್ತಾ ಇರಪ್ಪ' ಎಂದು ಹೇಳಿ ಮನಃ ತೃಪ್ತಿಯಾಗುವಷ್ಟು ದುಡ್ಡುಕಾಸು

ದವಸಧಾನ್ಯಗಳನ್ನು ಕೊಟ್ಟು ಕಳಿಸಿದರು. ಪಟೇಲ್ ನೀಲೇಗೌಡರ ಅಭಿಮಾನಕ್ಕೆ ಸೋತ ಸಿದ್ದಶೆಟ್ಟರು ಆಗಾಗ ಜೊತೆಗಾರರೊಡನೆ ಬೆಟ್ಟದ ಬೀಡಿಗೆ ಬಂದು ಹೋಗುತ್ತಿದ್ದರು.

ಆಗ ಸಿದ್ದಶೆಟ್ಟರಿಗೆ ಹದಿನೆಂಟರ ಹರಯ. ಅವರು ಒಬ್ಬೊಂಟಿ ಎಂಬ ವಿಚಾರವನ್ನು ತಿಳಿದುಕೊಂಡ ನೀಲೇಗೌಡ ತಮ್ಮವರೇ ಆದ ಪುಟ್ಟೇಗೌಡರು, ದೊಡ್ಡೇಗೌಡರು, ಚಿಕ್ಕಣ್ಣೇಗೌಡರು, ಜವರಣ್ಣೇಗೌಡ ಮತ್ತು ಸಿದ್ದೇಗೌಡರ ಜೊತೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದರು. ಅವರು ಸಿದ್ದಶೆಟ್ಟರನ್ನು ಹತ್ತಿರಕ್ಕೆ ಕರೆದು;

"ಸಿದ್ದಪ್ಪ, ನೀನು ನಮ್ಮೂರಲ್ಲೇ ನಮ್ಮ ಜೊತೇಲೇ ಇದ್ದುಬಿಡು. ನೀನು ನಮ್ಮ ಜನರ ಮಧ್ಯದಲ್ಲಿ ಇರ್ಬೇಕು ಅನ್ನೋದು ನಮ್ಮ ಆಸೆ. ನಿನಗೆ ನಮ್ಮ ಮನೆ ಒಸಾರದಲ್ಲಿ ಉಳುಕೊಳಕೆ ಜಾಗ ಕೊಡ್ತೀನಿ. ಅಷ್ಟೇ ಅಲ್ಲ, ನಮ್ಮ ಊರಲ್ಲಿರೋ ನಂಜಯ್ಯಶೆಟ್ಟರ ಕಿರೀಮಗಳು ಸುಬ್ಬಮ್ಮ ಇದ್ದಾಳಲ್ಲ; ಅವುಳ್ನ ನಿನಗೆ ಮದುವೆ ಮಾಡ್ಕೊಡ್ತೀವಿ. ನಿನಗೆ ಒಪ್ಪುಗೆಯೆ?" ಎಂದು ಕೇಳಿದರು.

ಸಿದ್ದಶೆಟ್ಟರು ದಿಙ್ಮೂಢರಾಗಿ ಕುಳಿತು ಪಟೇಲರ ಮುಖವನ್ನು ದಿಟ್ಟಿಸುತ್ತ ಫಳಫಳ ಕಣ್ಣೀರು ಸುರಿಸಿಬಿಟ್ಟರು. ಏನು ಮಾತಾಡಬೇಕೆಂಬುದೇ ತಿಳಿಯದಂತಾಗಿ ಕುತ್ತಿಗೆ ಕಟ್ಟಿ ಬಂದಿತ್ತು. ಸಿದ್ದಶೆಟ್ಟರು ಪಟೇಲರ ಪಾದಗಳಿಗೆ ಬಿದ್ದು,

"ಗೌಡ್ರೆ, ತಾವು ಮನಸ್ರಲ್ಲ, ಸಾಕ್ಷಾತ್ ದೇವ್ರು. ನೀವು ನನಗೆ ತಂದೆ ಸ್ಥಾನದಲ್ಲಿದ್ದೀರಿ. ನಾನು ನಿಮ್ಮ ಮಗ. ನೀವು ಕಾಲಿನಲ್ಲಿ ತೋರಿದ್ದ ನಾನು ತಲೆಲ್ಹೊತ್ತು ನಡುಸ್ತೀನಿ."

"ಸಿದ್ದಪ್ಪ, ಆಮೇಲೆ ಪಟೇಲರು ನನಗೆ ಅನ್ಯಾಯ ಮಾಡುದ್ರು ಅಂತ ಹೇಳಬಾರ್ದು. ಅದಕ್ಕೆ ಮೊದಲಿಗೆ ಒಂದು ಮಾತ್ಹೇಳ್ತೀನಿ. ನಂಜಯ್ಯಶೆಟ್ಟಿಗೆ

ಮಕ್ಕೆರ್ನಿಲ್ಲ. ಮಕ್ಳು ಫಲ ಕೇಳಕೆ ಅಂತ ಅವರೊಂದು ಸಲ ರಾವಣಿ (ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಕ್ಷೇತ್ರ) ಸಿದ್ದೇಶ್ವರನ ಜಾತ್ರೆಗೆ ಹೋಗಿದ್ರು. ಆ ಜಾತ್ರೇಲಿ ಯಾರೋ ಎರಡು ಹೆಣ್‌ಮಕ್ಕಳ್ನ ಬಿಟ್ಟುಬುಟ್ ಹೋಗಿದ್ರಂತೆ. ಅಳ್ತಾ ನಿಂತಿದ್ದ ಆ ಮಕ್ಕಳ್ನ ಯಾರೂ ಕೇಳೋರೇ ದಿಕ್ಕೆರ್ನಿಲ್ಲ. ಆಗ ಈ ಗಂಡಹೆಂಡ್ತಿರಿಬ್ರೂ ಒಂದೊಂದ್ ಮಗಾ ಎತ್ಕೊಂಡು ಆ ದಿನವೆಲ್ಲ ಜಾತ್ರೇಲಿ ಓಡಾಡುದ್ರಂತೆ. ಯಾರೂ ಆ ಮಕ್ಕಳ್ನ ನಮ್ಮವು ಎನ್ನದಿದ್ದಾಗ ಗಂಡ–ಹೆಂಡ್ತಿ ಆ ಮಕ್ಕಳ್ನ ತಂದು ಸಾಕುದ್ರು. ಹಿರಿಯೋಳು ಚಾಮವ್ವ, ಅವುಳ್ನ ಇದೇ ಊರಿನ ಪುಟ್ಟಶೆಟ್ಟರಿಗೆ ಕೊಟ್ಟು ಮದುವೆ ಮಾಡದೆ; ಕಿರಿಯೋಳು ಸುಬ್ಬಮ್ಮ. ಒಳ್ಳೇ ಹುಡುಗಿ. ಗುಣವಂತೆ, ನಿನಗೆ ಒಪ್ಪಾ ಹೇಳು?"

"ತಂದೆ ಮಾತು ಮಗ ಕೇಳದೇ ಇದ್ರೆ ಅವುರೆಂತ ತಂದೆ–ಮಗ ಗೌಡ್ರೆ?"

ಪಟೇಲ್ ನೀಲೇಗೌಡರು ತಮ್ಮ ಕುಲಸ್ಥರನ್ನೆಲ್ಲ ಸೇರಿಸಿ ತಾವೇ ನಿಂತು ಸುಬ್ಬಮ್ಮ–ಸಿದ್ದಶೆಟ್ಟಿಯವರ ಮದುವೆಯನ್ನು ಜನ ಮೆಚ್ಚುವಂತೆ ಮಾಡಿದರು. ಅವರನ್ನು ತಮ್ಮ ಊರಿಗೆ ತುಂಬಿಸಿಕೊಂಡರು. ಅವರ ಮನೆ ಒಸಾರದಲ್ಲಿಯೇ ಸಿದ್ದಶೆಟ್ಟರ ಸಂಸಾರದ ಹಣತೆ ಬೆಳಗತೊಡಗಿತು. ನೀಲೇಗೌಡರು, ಗವೀಗೌಡರು, ಕರೀಗೌಡರು, ಜವರಣ್ಣಗೌಡರು, ಚಿಕ್ಕಣ್ಣೇಗೌಡರು, ದೊಡ್ಡೇಗೌಡರು ಎಲ್ಲರೂ ಸೇರಿ ಶೆಟ್ಟರ ಸಂಸಾರಕ್ಕೆ ಬೇಕಾದ ಸಕಲೆಂಟು ಪಡಿಪದಾರ್ಥಗಳನ್ನು ಹದ್ದರು. ಅಲೆದಾಡುತ್ತಿದ್ದ ಶೆಟ್ಟರ ಬದುಕಿಗೆ ಒಂದು ನೆಲೆ ಸಿಕ್ಕಂತಾಯಿತು.

ಹೀಗಿರುವಾಗ ಸಿದ್ದಶೆಟ್ಟರು ಯಾವುದೋ ಊರಿಗೆ ಕಥೆ ಮಾಡಲು ಹೋಗಿದ್ದವರು ಸೂರ್ಯ ನೆತ್ತಿಗೆ ಬರುವ ಹೊತ್ತಿಗೆ ಹಟ್ಟಿಗೆ ಬಂದರು. ಆ ಸಮಯದಲ್ಲಿ ಸುಬ್ಬಮ್ಮನವರು ಹೊಲದ ನಾಟಿ ಕೆಲಸದ ಕೂಲಿಗೆ ಹೋಗಿದ್ದರು. ಪಟೇಲ್ ನೀಲೇಗೌಡರು ಮನೆಯಲ್ಲೇ ಇದ್ದರು. ಅದು

ಊಟದ ಹೊತ್ತು. ಅವರು ಸಿದ್ದಶೆಟ್ಟರನ್ನೂ ತಮ್ಮೊಂದಿಗೆ ಊಟಕ್ಕೆ ಕೂರಿಸಿಕೊಂಡರು. ಸಿದ್ದಶೆಟ್ಟರು ಎಂದೂ ರಾಗಿಮುದ್ದೆ ಉಂಡವರಲ್ಲ. ಅವರು ಮುದ್ದೆಯನ್ನು ಕೋಳಿ ತಿಪ್ಪೆ ಕೆರೆದಂತೆ ಕೈಬೆರಳುಗಳನ್ನೂರಿ ಕೀಳುತ್ತಿದ್ದರು. ಇದನ್ನು ಕಂಡ ಗೌಡರು ತಮ್ಮ ಹೆಂಡತಿ ಸಿದ್ದಮ್ಮನವರನ್ನು ಕರೆದು,

"ಲೇ ಸಿದ್ದಮ್ಮ, ಸಿದ್ದಶೆಟ್ಟಿಗೆ ಹಿಟ್ಟುಂಡು ಗೊತ್ತಿಲ್ಲ. ಐದು ಬೆಳ್ಳನೂ ಊರಿ ಮುದ್ದೆಯ ಕಿತ್ತು ಕಿತ್ತು ಎಸ್ರುಗೆ ಅಚ್ಕೊಂಡು ಬಾಯ್ಗಾಕೊಂಡು ಅಗೀತವುನೆ. ಅವುರವ್ವ ಬಾಳ ಸುಕದಲ್ಲಿ ಬೆಳುಸವುರೆ. ಇವುನ್ಗೆ ಹತ್ತು ಕೊಳಗ ಬತ್ತವ ಲೆಕ್ಕವಿಲ್ಲದ ರೀತೀಲಿ ಅಳುದು ಕೊಟ್ಬುಡು" ಅಂದ್ರು. ಇಂಥ ವಿಷಯಗಳನ್ನು ಹೇಳುವಾಗ ಶೆಟ್ಟರ ಹೃದಯ ತುಂಬಿ ಬರುತ್ತಿತ್ತು. ಕೃತಜ್ಞತೆಯ ದ್ಯೋತಕವಾಗಿ ಕಣ್ಣೀರು ಬಂದು ಬಿಡುತ್ತಿದ್ದವು. ಹೀಗೆ ಪಟೇಲರ ಹಾಗೂ ಸಿದ್ದಶೆಟ್ಟರ ಪ್ರೀತಿ, ವಿಶ್ವಾಸ, ಅಭಿಮಾನಗಳು ತ್ರಿವೇಣಿ ಸಂಗಮದಂತೆ ಮೊರೆಯುತ್ತಿದ್ದವು; ಬತ್ತದ ತೊರೆಯಂತೆ ಹರಿಯುತ್ತಿದ್ದವು.

ಸಿದ್ದಶೆಟ್ಟರ ಸಹಧರ್ಮಿಣಿ ಸುಬ್ಬಮ್ಮನವರು ಸಾಧ್ವೀ ಶಿರೋಮಣಿ. ಸಿದ್ದಶೆಟ್ಟರ ಸ್ವಭಾವಗಳಿಗೆ ಸಮಸ್ಪಂದಿಯಾಗಿ ಸಂಸಾರವನ್ನು ಎಂಥ ಸಂಕಷ್ಟ ಸ್ಥಿತಿಯಲ್ಲೂ ಸರಿದೂಗಿಸಿಕೊಂಡು ಹೋಗಬಲ್ಲ ಸದ್ಗೃಹಿಣಿ. ಗಂಡ ಕತೆ ಮಾಡಲು ಅಥವಾ ಉಪಾದಾನ ಮಾಡಲು ಊರೂರ ಮೇಲೆ ಹೋದರೆ ಸುಬ್ಬಮ್ಮನವರು ಅವರಿವರ ಮನೆಗಳಲ್ಲಿ ಬೀಸುವ, ಕುಟ್ಟುವ, ದವಸ-ಧಾನ್ಯಗಳನ್ನು ಶುಚಿಗೊಳಿಸುವ, ಮಕ್ಕಳು ಮರಿಗಳಿಗೆ ನೀರ್ಹುಯ್ಯುವ, ಹೆರಿಗೆ ಮಾಡಿಸುವ, ಬಾಣಂತನ ಮಾಡುವ, ಗೆಣೆಕಾತಿಯರೊಡನೆ ಕಂಡವರ ಹೊಲಗದ್ದೆ ತೋಟಗಳ ಬೆಳಸಾಯದ ಕೂಲಿ ಮಾಡುವ ಕೆಲಸಗಳಲ್ಲಿ ಬಂದ ಅಷ್ಟಿಷ್ಟು ದವಸ-ಧಾನ್ಯ ದುಡ್ಡುಕಾಸಿನಿಂದ ಸಂಸಾರವನ್ನು ನಿಭಾಯಿಸುತ್ತಿದ್ದರು. ನಾಕಾರು ಗಾಯಕರೊಡನೆ ಬರುತ್ತಿದ್ದ ಪತಿದೇವರು ಬಂದ ಉಪಾದಾನವನ್ನೆಲ್ಲ ಜೊತೆಗಾರರಿಗೆಲ್ಲ ಹಂಚಿಕೊಟ್ಟು ಬರಿಗೈಲಿ ಮನೆಗೆ ಬರುತ್ತಿದ್ದರು. ಹೀಗೆ ಬಂದುದನೆಲ್ಲ ಶಿಷ್ಯರಿಗೆ ಹಂಚಿ

ಪುರಂದರದಾಸರಂತೆ ಬರುತ್ತಿದ್ದ ಗಂಡನನ್ನು ಕಂಡು ಸುಬ್ಬಮ್ಮನವರಿಗೆ ಸಂಕಟವಾಗುತ್ತಿದ್ದರೂ ಗಂಡನ ಮನಸ್ಸನ್ನು ನೋಯಿಸಲಿಚ್ಛಿಸದೆ ಸುಮ್ಮನಾಗಿಬಿಡುತ್ತಿದ್ದರು. ಒಮ್ಮೆಮ್ಮೆ ಗಾಯಕ ಸಮೂಹವೇ ಬೆಟ್ಟದ ಬೀಡಿಗೆ ದಯಮಾಡಿಸುತ್ತಿತ್ತು. ಆಗ ಶೆಟ್ಟರು 'ನಾವ್ ಉಪಾದಾನ ಮಾಡ್ಕೊಂಡ್ ಬರ್ತೀವಿ. ಐದಾರು ಜನುಕ್ಕೆ ಅಡ್ಗೆ ಮಾಡಿರು' ಎಂದು ಹೇಳಿ ಹೋಗಿಬಿಡುತ್ತಿದ್ದರು. ಇಂಥ ಸಂದರ್ಭದಲ್ಲಿ ಸುಬ್ಬಮ್ಮನವರು ಅವರಿವರ ಮನೆಗಳಿಂದ ಅಕ್ಕಿಬೇಳೆ ತಂದು ಅಡಿಗೆ ಮಾಡಿ ಉಣ್ಣಿಕಿಕ್ಕುತ್ತಿದ್ದರು. ಈ ಸಾಲವನ್ನೆಲ್ಲ ಅವರ ಮನೆಗಳ ಕೆಲಸ ಮಾಡಿ ತೀರಿಸುತ್ತಿದ್ದರು. ನಿಜ ಹೇಳಬೇಕೆಂದರೆ ಸಹನೆಯ ಸೊಡರಿನಂತಿದ್ದ ಸುಬ್ಬಮ್ಮನವರನ್ನು ಪಡೆದ ಪುಣ್ಯಶಾಲಿ ಸಿದ್ದಶೆಟ್ಟರು ಎನ್ನುವಷ್ಟರ ಮಟ್ಟಿಗೆ ಸುಬ್ಬಮ್ಮನವರು ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು.

ಸಿದ್ದಶೆಟ್ಟರಿಗೆ ತಮ್ಮ ಮಡದಿ ಸುಬ್ಬಮ್ಮನವರ ಪುಣ್ಯಗರ್ಭದಿಂದ ಪಂಚರತ್ನಗಳಂತೆ ಸಿದ್ದಶೆಟ್ಟಿ ಮತ್ತು ಮಾದಶೆಟ್ಟಿ ಎಂಬ ಇಬ್ಬರು ಗಂಡುಮಕ್ಕಳು; ಮಾದಮ್ಮ, ಸಿದ್ದಮ್ಮ ಮತ್ತು ಸುಬ್ಬಮ್ಮ ಎಂಬ ಮೂವರು ಹೆಣ್ಣು ಮಕ್ಕಳು ಹುಟ್ಟಿದರು. ಸಂಸಾರ ಹಿಗ್ಗುತ್ತಿರುವಾಗ ಪಟೇಲರು ಹೊಸಮನೆ ಕಟ್ಟಲು ಹಳೇಮನೆ ಕೆಡವಬೇಕಾಯ್ತು. ಆಗ ಸಿದ್ದಶೆಟ್ಟರ ಸಂಸಾರ ಪಟೇಲರ ಒಸಾರೆಯಿಂದ ದೇವೇಗೌಡರ ಒಪ್ಪಾರಕ್ಕೆ ಮನೆ ಬದಲಿಸಿತು. ದೇವೇಗೌಡರ ಮಗಳು ಕೆಂಪಮ್ಮನವರು ಸುಬ್ಬಮ್ಮನವರಿಗೆ ಅಚ್ಚುಮೆಚ್ಚಿನ ಗೆಳತಿಯಾದರು. ಹೊಲಗದ್ದೆ ತೋಟಗಳಿಗೆ ಹೋಗಲಿ, ನೀರು ನೀಡಿ ತರುವುದಕ್ಕೆ ಹೋಗಲಿ, ಸೊಪ್ಪು-ಸೌದೆ ಪುಳ್ಳೆ ಪುಸುಗಲು ತರುವುದಕ್ಕೆ ಹೋಗಲಿ ಎಲ್ಲೆಲ್ಲೂ ಇವರದೇ ಜೊತೆ. ಅಲ್ಲದೆ ಸುಬ್ಬಮ್ಮನವರು ಊರ ಹೆಂಗಸರ ನಡುವೆ ಎಂದೂ ಅಸುಖಿ ಎಂಬ ಭಾವನೆಯೇ ಬರದಂತೆ ಬಾಳಿದರು.

ಸಿದ್ದಶೆಟ್ಟರು ಮೂಲತಃ ನೀಲಗಾರರು. ತಂಬೂರಿಯನ್ನು ಬಾರಿಸಿಕೊಂಡು ಹಾಡುತ್ತಿದ್ದ ಅವರು, ಶಿಷ್ಯನೊಬ್ಬನು ಬಂದು 'ಗುರುವೆ ನನಗೆ

ಈ ತಂಬೂರಿ ಕೊಟ್ಬುಡಿ. ನಿಮ್ಮೆಸ್ರೇಳ್ಕೊಂಡು ಕಥ ಮಾಡಿ ಬದುಕ್ಕೋತೀನಿ' ಎಂದನಂತೆ. ಇಷ್ಟು ಕೇಳಿದ್ದೇ ಸಾಕು ಕೊಡುಗೈಯ ದಾನಿಯಾಗಿದ್ದ ಸಿದ್ದಶೆಟ್ಟರು ಹಿಂದು ಮುಂದು ನೋಡದೆ ಕೊಟ್ಟುಬಿಟ್ಟರು. ಅನಂತರ ಕಥೆ ಮಾಡಲು ಕಂಸಾಳೆಯನ್ನು ಬಳಸುತ್ತಿದ್ದರು. ಕಥೆ ಮಾಡುವಾಗ ತಂಬೂರಿ ನುಡಿಸುತ್ತಿದ್ದರೆ ಹಾಡಲು ಚಂದ ಎನ್ನುತ್ತಿದ್ದ ಅವರು ವೃತ್ತಿ ಗಾಯಕರ ಕಾವ್ಯಗಳಲ್ಲಿ ಹಾಡುಗಳ ನಡುವೆ ವಚನ ಬಂದಾಗ ಅದಕ್ಕೆ ಕಂಸಾಳೆಯೇ ಸರಿ ಎನ್ನುತ್ತಿದ್ದರು. ಅದರಲ್ಲೂ ಸಂಭಾಷಣೆಗಳು ಬಂದಾಗ ಈ ವಚನದಲ್ಲಿ ತನ್ಮಯರಾಗುತ್ತಿದ್ದರು. ಈ ನಾಟಕೀಯ ಸಂಭಾಷಣೆಗಳನ್ನು ಹೆಣೆಯುವ ವಚನವೈಭವವನ್ನು ಹಾಡುತ್ತ, ತನ್ಮಯರಾಗಿ ವಾದ್ಯದ ನಾದದೊಡನೆ ಮೈಮರೆಯುತ್ತಿದ್ದ ಸಿದ್ದಶೆಟ್ಟರ ಅಭಿನಯವನ್ನು ಕಣ್ಣಾರೆ ಕಂಡಿದ್ದವರು ಮರೆಯುವುದಾದರೂ ಹೇಗೆ?

ಸಿದ್ದಶೆಟ್ಟರು ಜನಪದ ವೈದ್ಯರೂ ಆಗಿದ್ದರು. ಹಾವು ಕಚ್ಚಿದ್ದಕ್ಕೆ, ಬೆನ್ನುಪಣಿ, ಅಂಗಾಲುಪಣಿ, ಸರ್ಪಸುತ್ತು, ಹೆಂಗಸರ ಕಾಯಿಲೆಗಳು, ಮಕ್ಕಳ ಫಲ–ಮುಂತಾದವುಗಳಿಗೆಲ್ಲ ಔಷಧ ಕೊಡುತ್ತಿದ್ದರು. ನೀವು ಎಷ್ಟು ಕಡೆ ಕಥೆ ಮಾಡಿದ್ದೀರಿ ಎಂದರೆ 'ಅದೊಂದು ಬ್ರಹ್ಮಾಂಡ' ಎನ್ನುವ ಸಿದ್ದಶೆಟ್ಟರು ನಜರ್‌ಬಾದಿನ ತಮ್ಮಯ್ಯಪ್ಪನವರು ಕಥೆ ಮಾಡಿಸಿದಾಗ ಅದನ್ನು ಕೇಳಿ 'ಇಂಪ್ರೆಸ್ಸಾಗದೆ' ಎಂದು ಸಂತೋಷಪಟ್ಟ ಮಂಡ್ಯದ ಕೊಪ್ಪಲಿನ ಬೆಲ್ಲದ ಪಾಪಣ್ಣ ತಮ್ಮ ಊರಿಗೆ ಕಥೆ ಮಾಡಲು ಕರೆದುಕೊಂಡು ಹೋದರಂತೆ. (ಅದು ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾದ ವರ್ಷ). ಬೆಲ್ಲದ ಪಾಪಣ್ಣನವರಿಗೆ ಮಕ್ಕಳಿಲ್ಲವೆಂದು ತಿಳಿದು ಅವರನ್ನು ಬೆಟ್ಟದಬೀಡಿಗೆ ಕರೆಸಿಕೊಂಡು ಆ ಊರಿನ ಗ್ರಾಮದೇವರು ರಂಗೋಲೆ ಬಸಪ್ಪನ ಹೆಸರಿನಲ್ಲಿ ಅಂತ್ರ ಕಟ್ಟಿಕೊಟ್ಟರಂತೆ. ಆಗ ಪಾಪಣ್ಣನವರಿಗೆ ಸಂತಾನಭಾಗ್ಯ ಪ್ರಾಪ್ತವಾಯಿತಂತೆ. ಪಶುವೈದ್ಯ ಚಿಕಿತ್ಸೆಯೂ ಸಿದ್ದಶೆಟ್ಟರಿಗೆ ತಿಳಿದಿತ್ತು. ಊರಿನ ಜನರು ಸಿದ್ದಶೆಟ್ಟರನ್ನು ಪವಾಡಪುರುಷನನ್ನು ಕಂಡಂತೆ ಕಾಣುತ್ತಿದ್ದರು. ಯಾವುದೇ ಮಗುವಿಗೆ ಹುಷಾರಿಲ್ಲದಿದ್ದರೂ 'ಸಿದ್ದಶೆಟ್ಟರ ಕೈಲಿ ಮಂತ್ರ

ಹಾಕ್ಸಿ' ಸಿದ್ದಶೆಟ್ರ ಕೈಲಿ ಅಂತ್ರ ಕಟ್ಟುಸುದ್ರೆ ಸಾಕು ಎಲ್ಲಾ ವಾಸಿಯಾಯ್ತದೆ' ಎನ್ನುತ್ತಿದ್ದರು. ಅವರಿಗೆ ಅತೀಂದ್ರಿಯ ಶಕ್ತಿ ಇದೆ ಎಂದೂ ಆ ಜನರು ಭಾವಿಸಿದ್ದಂತೆ ತೋರುವ ಒಂದು ಘಟನೆಯನ್ನು ಹೇಳುತ್ತಾರೆ:

ಒಮ್ಮೆ ಮೈಸೂರಿಗೆ ಉಪಾದಾನಕ್ಕೆಂದು ಬಂದ ಶೆಟ್ಟರು ಆ ದಿನ ಹಿಂದಿರುಗಲಾರದೆ ಮೈಸೂರಿನ ಪಡುವಾರಹಳ್ಳಿಯ ಮಾರಿಗುಡಿ ಜಗುಲಿಯ ಮೇಲೆ ತಂಗಿಕೊಂಡರು. ಆಗ ನಿಸ್ರಾತ್ರೆ ಜಾಮ. ಅಂಥ ಸಪ್ಪೊಟ್ಟು ಸರ್ಹೊತ್ತಿನಲ್ಲಿ ಶೆಟ್ಟರು ಗಾಢನಿದ್ರೆಯಲ್ಲಿ ಮುಳುಗಿದ್ದರು. ಆಗ ಯಾರೊ ಬಂದು 'ನಿಮ್ಮ ಮಗಳು ಸಿದ್ದಮ್ಮನ ಕಾಲಿಗೆ ಹಾವು ಸುತ್ತಿಕೊಂಡಿದೆ!' ಎಂದು ಹೇಳಿ ತಟ್ಟಿ ಎಬ್ಬಿಸಿದಂತಾಯಿತು. ಸಿದ್ದಶೆಟ್ಟರು ಥಟ್ಟನೆ ಮೇಲೆದ್ದು ಜೋಳಿಗೆಯನ್ನು ಹೆಗಲಿಗೇರಿಸಿಕೊಂಡು ಆ ಸಮಸಮ ರಾತ್ರಿಯಲ್ಲೇ ಬೆಟ್ಟದ ಬೀಡು ದಾರಿ ಹಿಡಿದು ನಡೆದೇಬಿಟ್ಟರು. ಮನೆಯನ್ನು ಸೇರುವ ಹೊತ್ತಿಗೆ ಕೋಳಿ ಕೂಗಿತ್ತು. ಸಿದ್ದಶೆಟ್ಟರ ಮನೆ ಮುಂದೆ ಜನ ಸೇರಿತ್ತು. ಗಾಬರಿಗೊಂಡ ಶೆಟ್ಟರು ಜನರನ್ನು ಸರಿಸುತ್ತ ಮನೆಬಾಗಿಲಿಗೆ ಬಂದರು. ಅಲ್ಲಿ ನೋಡಿದರೆ ಮಗಳ ಕಾಲಿಗೆ ಸುತ್ತಿಕೊಂಡಿದ್ದ ಹಾವು ಶೆಟ್ಟರನ್ನು ಕಂಡ ಕೂಡಲೆ ಮೆಲ್ಲನೆ ಹರಿದಾಡಿಕೊಂಡು ಬಾಗಿಲ ಬಳಿಗೆ ಬಂದು ತೆಕ್ಕೆ ಹಾಕಿಕೊಂಡು ಸೆಡೆಯಾಡಿಸತೊಡಗಿತು. ಆಗ ಸಿದ್ದಶೆಟ್ಟರು "ಅಪ್ಪಾ ನಾಗಪ್ಪ ನಮ್ಮಿಂದ ಏನ್ ತಪ್ಪಾಗಿದ್ರೂ ಮಾಪ್ ಮಾಡಿ ದಯವಾಗು ತಂದೆ" ಎಂದು ಕೈ ಮುಗಿದು ಕೇಳಿಕೊಂಡಾಗ ಸರ್ಪ ಮನೆಯಿಂದ ಹೊರಕ್ಕೆ ಬಂದು ಮರೆಯಾಯಿತು. ಇದನ್ನು ಕಣ್ಣಾರೆ ಕಂಡಿದ್ದ ದ್ಯಾವಪ್ಪನವರ ಕೆಂಪಮ್ಮನವರು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿ ಹೇಳುತ್ತಾರೆ.

ಮಕ್ಕಳೆಲ್ಲರಿಗೂ ಮದುವೆ ಮಾಡಿದ ಸಿದ್ದಶೆಟ್ಟರು ಗಂಡುಮಕ್ಕಳ ಜೊತೆ ವಾಸವಾಗಿದ್ದರು. ಮಳೆ ಚೆನ್ನಾಗಿ ಬಿದ್ದಾಗ ಬೆಟ್ಟದ ಬೀಡಿನಲ್ಲಿ ಹಿಡಿದಿದ್ದ ನಾಲ್ಕು ಎಕರೆ ದರಕಾಸ್ತು ಭೂಮಿಯಲ್ಲಿ ರಾಗಿ, ಜೋಳ, ಹುರುಳಿ, ತೊಗರಿ ಮುಂತಾದವುಗಳನ್ನು ಬೆಳೆಯುತ್ತಾರೆ. ಉಳಿದ ದಿನಗಳಲ್ಲಿ ಹೊಟ್ಟೆಪಾಡಿಗಾಗಿ ಕಾಮಾಟಿ ಕೆಲಸ, ಗೊಂಬೆ ಮಾಡುವ ಕೆಲಸಕ್ಕೆ ಮೈಸೂರಿಗೆ ಬರುತ್ತಾರೆ.

ಹಿರಿಯ ಮಗ ಸಿದ್ದಶೆಟ್ಟಿಯ ಹೆಂಡತಿ ಗೌರಮ್ಮ. ಇವರಿಗೆ ಜಯಲಕ್ಷ್ಮಿ, ಮಾದೇವಿ, ಮಾದೇವ, ಕುಮಾರ ಎಂಬ ನಾಲ್ವರು ಮಕ್ಕಳಿದ್ದಾರೆ. ಎರಡನೇ ಮಗ ಮಾದಸೆಟ್ಟಿಯ ಹೆಂಡತಿ ಜಯಮ್ಮ. ಇವರಿಗೂ ಮಾದೇವಿ, ರವಿ, ಚಂದ್ರ, ಮಂಜಿ ಎಂಬ ನಾಲ್ಕು ಮಕ್ಕಳಿವೆ. ಈ ಎರಡೂ ಸಂಸಾರಗಳು ಬೇರೆ ಬೇರೆ ಇವೆ. ಇಬ್ಬರಿಗೂ ಜನತಾ ಮನೆಗಳು ಸಿಕ್ಕಿವೆ. ಈ ಇಬ್ಬರೂ ತಂದೆಯ ಗಾಯನ ಕಲೆಯನ್ನು ರೂಢಿಸಿಕೊಂಡವರಲ್ಲ. ಆದರೆ ತಂದೆಯಂತೆಯೇ ಸಾತ್ವಿಕರು, ಪ್ರಾಮಾಣಿಕರು ಹಾಗೂ ಸುಗುಣಸಂಪನ್ನರು. ಈ ಮಕ್ಕಳ ವಿಚಾರದಲ್ಲಿ ಊರಿನವರಿಗೆಲ್ಲ ಒಳ್ಳೆಯ ಅಭಿಪ್ರಾಯವಿದೆ. ಈ ಮಕ್ಕಳು ಒಮ್ಮೆ ಸಿದ್ದಶೆಟ್ಟರಲ್ಲಿ ಹೊರಳ್ಳಿ ಆಸ್ತಿಯ ಬಗೆಗೆ ಮಾತೆತ್ತಿದಾಗ ಶೆಟ್ಟರು:

"ಅವತ್ತು ನಮ್ಮ ಚಿಕ್ಕಪ್ಪ ಒಳ್ಳೆ ಮನುಸ್ನಲ್ಲಿ ಕೊಟ್ಟೋದ್ರು. ಆದ್ರೆ ಇವತ್ತು ನಮ್ಮ ಚಿಕ್ಕಪ್ಪನ ಮಕ್ಳು ಬಂದು ಕೇಳ್ತಾವುರೆ. ಅವತ್ತು ಮನಸ್ತುಂಬಿ ಕೊಟ್ಟೋರು ಇವತ್ತು ಮಕ್ಕುಳ್ನ ಮುಂದೆ ಬುಟ್ಕೊಂಡು ಕೇಳುಸ್ತಾ ಅವುರೆ ಅಂದ್ಕೋತಾರೆ. ಯಾವುದಕ್ಕೂ ಆಸ್ ಬೀಳ್ಬೇಡ್ರಪ್ಪ" ಎಂದುಬಿಟ್ಟರಂತೆ. "ನಮ್ಮಪ್ಪುಂಗೆ ಬ್ಯಾಡಾದ್ದು ನಮಗೂ ಬ್ಯಾಡ ಸ್ವಾಮಿ" ಎನ್ನುವ ಅವರ ಕಿರೀಮಗ "ನಮ್ಮಪ್ಪ ಪ್ರೀತೀಂದ ಒಬ್ರು ಫೋಟೊ ಮಡೀಕೊಂಡಿದ್ರು. ಅವುರ್ಗೆ ಬೇಕಾದವ್ರು ಅಂದ್ರೆ ಅವುರು ದೊಡ್ಡೋರು ಅಂತ್ಹೇಳಿ ಅದ ಕಟ್ಟಾಕ್ಸಿ ಮಡಿಕೊಂಡಿವಿ" ಎಂದು ಹೇಳಿದರು. "ಅದು ಯಾರ್ದಿರಬಹುದು ನೋಡೋಣ ತನ್ನಿ" ಎಂದಾಗ ಸಿದ್ದಶೆಟ್ಟರು ನನ್ನಿಂದ ತೆಗೆದುಕೊಂಡು ಹೋಗಿದ್ದ ನಾನು ವಿದ್ಯಾರ್ಥಿಯಾಗಿದ್ದಾಗಿನ ಫೋಟೊ ಒಂದನ್ನು ತಂದು ತೋರಿಸಿದರು. ಆಗ ನನ್ನ ಹೃದಯ ತುಂಬಿ ಬಂತು. ನನಗರಿವಿಲ್ಲದಂತೆ ಕಣ್ಣುಗಳು ಒದ್ದೆಯಾದವು. ಒಬ್ಬ ಕಲಾವಿದನಿಂದ ಇಷ್ಟೊಂದು ಪ್ರೀತಿಗೆ ಪಾತ್ರನಾದುದಕ್ಕೆ ಧನ್ಯತಾಭವದಿಂದ ಮೈ ಜುಮ್ಮೆಂದಿತು.

ಸಿದ್ದಶೆಟ್ಟರು ಸುಮಾರು ಮೂವತ್ತು ವರ್ಷದವರಾಗಿದ್ದಾಗ ಅರಮನೆಯಲ್ಲೂ ಹಾಡಿದ್ದರಂತೆ. ಬಹುಶಃ ದಸರಾ ಸಂದರ್ಭದಲ್ಲಿರಬಹುದು. ಅಲ್ಲದೆ ಕಪ್ಪಡಿಯಲ್ಲಿ ಕಥೆ ಮಾಡುತ್ತಿದ್ದುದನ್ನು

ಕೇಳಿದ ಬೊಪ್ಪಗೌಡನಪುರದ ದೊಡ್ಡಬುದ್ಧಿಯವರು ಮಠಕ್ಕೆ ಕರೆಸಿಕೊಂಡು ಕಥೆ ಮಾಡಿಸಿ ೨೫ ಬೆಳ್ಳಿ ರೂಪಾಯಿ, ನೀಲಗಾರರ ಪೇಟ, ಜೋಳಿಗೆ, ಬೆತ್ತ, ಅಕ್ಕಿ, ಬೇಳೆ ಬೆಲ್ಲವನ್ನು ಕೊಟ್ಟು ಸನ್ಮಾನಿಸಿದ್ದರಂತೆ.

ಸಿದ್ದಶೆಟ್ಟಿಯವರು ಉಪಾದಾನದಿಂದ ಹಿಂದಿರುಗಿದಾಗ ಏನೇ ತಂದಿದ್ದರೂ ಅದನ್ನೆಲ್ಲ ಮನೆಯವರಿಗಲ್ಲದೆ ಇತರರಿಗೂ ಹಂಚುತ್ತಿದ್ದರು. ಬೆಳದಿಂಗಳ ರಾತ್ರಿಗಳಲ್ಲಿ ಎಲ್ಲರನ್ನೂ ಕೂರಿಸಿಕೊಂಡು ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದರು. ಕಿರಿಯರನ್ನು ಪ್ರೀತಿಯಿಂದ ಮಾತನಾಡಿಸಿ 'ನೋಡ್ರಪ್ಪ ಏಕವಚನದಿಂದ ಮಾತಾಡಿಸಬೇಡಿ. ಗೌರವದಿಂದ ಮಾತಾಡ್ಸಿ. ಗುರುಹಿರಿಯರು ಅಂದ್ರೆ ಭಯ-ಭಕ್ತಿಯಿಂದ ನಡೆದುಕೊಳ್ಳಿ. ಕಲ್ಲಲ್ಲಿ ಹೊಡೆದೋರ್ಗೆ ಬೆಣ್ಣೇಲಿ ಹೊಡೀರಿ' ಎಂದೆಲ್ಲ ಬೋಧಿಸುತ್ತಿದ್ದರು. ಯಾರೋ ಒಬ್ಬ ಕೆಂಪಮ್ಮನನ್ನು 'ಮುಂಡೆ' ಎಂದು ಬೈದನಂತೆ. ಅದಕ್ಕೆ ಸಿದ್ದಶೆಟ್ಟರು 'ನಾನು ನಿನ್ನ ಮಗ್ಳು' ಅಂತ ಹೇಳವ್ವ ಎಂದು ಹೇಳಿಕೊಟ್ಟರಂತೆ.

ಸುಬ್ಬಮ್ಮನವರು ಅನಾರೋಗ್ಯದಿಂದ ನರಳುತ್ತಿದ್ದರು. ಅಂಥ ಸ್ಥಿತಿಯಲ್ಲಿದ್ದ ಪತ್ನಿಯನ್ನು ಕರೆದುಕೊಂಡು ಶೆಟ್ಟರು ನನ್ನ ಮನೆಗೆ ಬಂದಿದ್ದರು. ಸಭ್ಯತಾದೇವತೆಯಂತಿದ್ದ ಅವರನ್ನು ಕಂಡು ನನಗೆ ತುಂಬ ಸಂತೋಷವೆನಿಸಿತು. ಅಂದು ಅವರು ನನ್ನ ಕೋರಿಕೆಯಂತೆ 'ಹೇಮರೆಡ್ಡಿ ಮಲ್ಲಮ್ಮ' ಎಂಬ ಕಥನಗೀತೆಯನ್ನು ಹಾಡಿದರು. ಅದೀಗ ಪ್ರಕಟವಾಗುತ್ತಿದೆ. ಆ ದಂಪತಿಗಳ ಆಶೀರ್ವಾದ ಪಡೆದ ನಾನು ಅವರನ್ನು ಪ್ರೀತಿಯಿಂದ ಉಪಚರಿಸಿ ಬೀಳ್ಕೊಟ್ಟಿದ್ದೆ. ಬಹುಶಃ ಇದು ೧೯೮೭ರ ಅವಧಿಯೆಂದು ಎಣಿಸಿದ್ದೇನೆ. ನಾನು ಸುಬ್ಬಮ್ಮನವರನ್ನು ಮತ್ತೆ ನೋಡಲಾಗಲೇ ಇಲ್ಲ. ೧೯೮೮ರಲ್ಲಿ ಅವರು ವಿಧಿವಶರಾದರು. ಅವರು ತೀರಿಕೊಂಡ ಮೇಲೆ ಸಿದ್ದಶೆಟ್ಟರು ಮೈಸೂರಿನ ತೊಣಚಿಕೊಪ್ಪಲಿನಲ್ಲಿ ಮನೆ ಮಾಡಿಕೊಂಡಿದ್ದ ಕಿರಿಯ ಮಗ ಮಾದಶೆಟ್ಟಿಯ ಜೊತೆಯಲ್ಲಿದ್ದರು. ಆ ಇಳಿವಯಸ್ಸಿನಲ್ಲೂ ದೊಣ್ಣೆ ಊರಿಕೊಂಡು ನಡುಗುತ್ತ ಗಂಗೋತ್ರಿಯಲ್ಲಿರುವ ನಮ್ಮ ಮನೆಗೆ ಬರುತ್ತಿದ್ದರು. "ಇಷ್ಟು ಕಷ್ಟಪಟ್ಟುಕೊಂಡು ಯಾಕೆ ಬರಾಕೋದ್ರಿ?" ಎಂದು

ಕೇಳಿದರೆ "ರಾತ್ರಿ ಎಲ್ಲ ನನ್ನ ಕನುಸ್ನಲ್ಲಿ ನೀವೇ ಕಾನ್ತಿದ್ರಿ ರಾಶೇಕ್ರಪ್ಪ. ನೋಡೋಂಗಾಯ್ತು ಬಂದ್ಬುಟ್ಟೆ" ಎನ್ನುತ್ತಿದ್ದರು. ಅವರು ನಮ್ಮ ಮನೆಗೆ ಬಂದ ಹೊತ್ತಿನಲ್ಲಿ ನಾವ್ಯಾರೂ ಇಲ್ಲವಾದಲ್ಲಿ ತೊಟ್ಟಿಯಲ್ಲಿರುತ್ತಿದ್ದ ನೀರನ್ನು ಚೊಂಬಿನಲ್ಲಿ ಮೊಗೆದು ಮನೆ ಮುಂದಿನ ಹೂಗಿಡಗಳಿಗೆಲ್ಲ ಹಾಕುತ್ತಿದ್ದರು. "ಈ ಗಿಡಗಳಿಗ್ಯಾಕೆ ಹಾಕುದ್ರಿ? ಅವೇನು ಹೂ ಬಿಡೋದಿಲ್ಲ" ಎಂದರೆ "ಯಾವ ಗಿಡಕ್ಕೂ ವಂಚನೆ ಆಗಬಾರದು. ಹಂಗೇನಾರೂ ಹೂಯ್ದೋ ಹೋದರೆ ಎಲ್ಲಾ ಗಿಡಗಳಿಗೂ ಹೂದು ನನಗ್ಹೊಯ್ಯದೆ ವಂಚನೆ ಮಾಡುದ್ರು ಅಂದ್ಕೋತದೆ. ಅದಕ್ಕೆ ಅದ್ಕೂ ಹೂದೆ" ಎನ್ನುತ್ತಿದ್ದರು ಮಗುವಿನ ಮನಸ್ಸಿನ ಸಿದ್ದಶೆಟ್ಟರು.

ಸಿದ್ದಶೆಟ್ಟರು ನನ್ನ ವಿಚಾರದಲ್ಲಿ ಅತಿಯಾದ ಅಭಿಮಾನವನ್ನು ಇಟ್ಟುಕೊಂಡಿದ್ದರು. ನನ್ನನ್ನು ಕಂಡರೆ ಅವರಿಗೆ ಅಪಾರ ಪ್ರೀತಿ, ಅನುಪಮ ವಿಶ್ವಾಸ. ೧೯೭೨ರಲ್ಲಿ ಮೈಸೂರಿನ ಜೋಪಡಿ ಮಾದಯ್ಯನವರು ಸಿದ್ದಶೆಟ್ಟರನ್ನು ನನಗೆ ಪರಿಚಯಿಸಿಕೊಟ್ಟ ಹೊಸದರಲ್ಲಿ ಅವರು ಅಂಜುತ್ತ, ಅಳುಕುತ್ತ ಬೇಡಿಕೆಯೊಂದನ್ನು ನನ್ನ ಮುಂದಿಟ್ಟರು. 'ರಾಶೇಕ್ರಪ್ಪ ನೀವು ತಪ್ಪು ತಿಳ್ಕೊಳ್ಳೋದಿಲ್ಲ ಅನ್ನೋದಾದ್ರೆ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ಕೇಳಬಹುದ?" 'ಸಂಕೋಚ ಬೇಡಿ. ಅದೇನು ಹೇಳಿ' 'ನನಗೆ ನಂ ಊರ ಹಿರೀಕರು ಕಷ್ಟಪಟ್ಟು ನಾಕು ಎಕರೆ ದರಕಾಸ್ತು ಭೂಮಿ ಕೊಡಸವುರೆ. ಅದ ಉಳಾಕೆ ಇದ್ದ ಎತ್ತುಗಳಲ್ಲಿ ಒಂದು ಸತ್ತೋಯ್ತು. ಈಗ ಒಂದದೆ. ಅದಕ್ಕೆ ಇನ್ನೊಂದು ಎತ್ತ ಹೊಂದುಸ್ಬೇಕು. ನಿಮಗೆ ನನ್ನಲ್ಲಿರೊ ಕಥೆಗಳ್ನೆಲ್ಲ ಹಾಡ್ಕೊಡ್ತೀನಿ. ಸಿಬ್ರಿ ಮಾಡ್ಕೋಬೇಡಿ, ಹಿಂಗೆ ಕೇಳ್ತಾ ಅವುನಲ್ಲ ಅಂತ. ನೀವು ಒಂದು ಎತ್ತು ತಕ್ಕೊಟ್ರೆ ನನ್ನ ಮಕ್ಕ ಬೆಳೆಸಾಯ ಮಾಡ್ಕೊಂಡು ನಿಮ್ಮೆಸ್ರೇಲಿ ಒಂದು ಗುಟುಕು ಗಂಜಿ ಕುಡ್ಕೊಂಡು ಬದುಕ್ತರೆ', 'ಶೆಟ್ರೆ, ಎತ್ತಿಗೆ ಎಷ್ಟಾಗಬಹುದು?' 'ಒಂದಿನ್ನೂರೈವತ್ತು–ಮುನ್ನೂರಾಗಬವುದು' (೧೯೭೨ರಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಯು.ಜಿ.ಸಿ.ವೇತನ ಮೂರು ನೂರು ರೂಪಾಯಿ ಮಾತ್ರ. ಅದು ಈಗ ಹತ್ತು ಸಾವಿರದವರೆಗೆ

ಏರಿದೆ). 'ಹಾಗಾದ್ರೆ ಖಂಡಿತ ಕೊಡ್ತೀನಿ ಶೆಟ್ರೆ' ಎಂದು ಹೇಳಿ ನನಗೆ ಬಂದಿದ್ದ ಒಂದು ತಿಂಗಳ ವಿದ್ಯಾರ್ಥಿ ವೇತನವನ್ನು ಸಿದ್ದಶೆಟ್ಟರಿಗೆ ಕೊಟ್ಟೆ. ಅವರು ಕನಸು-ಮನಸಲ್ಲೂ ಹೀಗಾಗಬಹುದೆಂದು ನೆನೆಸಿರಲಿಲ್ಲ. ತುಂಬಿ ಬಂದ ಕೃತಜ್ಞತೆಯ ಕಣ್ಣುಗಳಿಂದ ನನ್ನನ್ನು ನೋಡುತ್ತ ಅವರು ನನ್ನೆರಡು ಕೈಗಳನ್ನೂ ಹಿಡಿದು ತಮ್ಮ ಹಣೆಗೊತ್ತಿಕೊಂಡರು. ಅವತ್ತಿನಿಂದ ಪ್ರಾರಂಭವಾದ ನಮ್ಮ ಆತ್ಮೀಯ ಸಂಬಂಧ ಕೊನೆಯವರೆಗೂ ಉಳಿಯಿತು.

ಸಿದ್ದಶೆಟ್ಟರು ೧೯೭೨ ರಿಂದ ೧೯೭೬ರವರೆಗೆ ಯಾವಾಗೆಂದರೆ ಆವಾಗ ಮಾನಸಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿನಿಲಯದ ೧೭೯ನೇ ನಂಬರಿನ ನಾನಿದ್ದ ರೂಮಿಗೆ ಬರುತ್ತಿದ್ದರು. ಜನಪದ ಮಹಾಭಾರತದ ಒಂದೊಂದು ಕಥಾಭಾಗವನ್ನು ಒಂದೊಂದು ಪರ್ವವೆಂದು ಕರೆದು ಆಯಾ ದಿನದಲ್ಲಿ ಹಾಡಿ ಹೋಗುತ್ತಿದ್ದರು. ನಾನು ೧೯೭೬ರಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಲಯವನ್ನು ಬಿಟ್ಟೆ. ಅಲ್ಲಿಂದ ೧೯೮೨ರವರೆಗೂ ನಾನು ಸಿದ್ದಶೆಟ್ಟರನ್ನು ಭೇಟಿ ಮಾಡಲಾಗಲೇ ಇಲ್ಲ. ಮಹಾಭಾರತವೂ ಪೂರ್ಣಗೊಂಡಿರಲಿಲ್ಲ.

ನಾನು ಮಹಾರಾಜ ಕಾಲೇಜಿನ ಕನ್ನಡ ಉಪನ್ಯಾಸಕನಾಗಿ ಖಾಯಂ ಆದ ಮೇಲೆ ಮಾನಸಗಂಗೋತ್ರಿಯ ಫ್ಲಾಟ್‌ನ ಮೂವತ್ತನೇ ವಸತಿಯಲ್ಲಿದ್ದೆ. ಮಹಾರಾಜ ಕಾಲೇಜಿನ ವಿದ್ಯಾರ್ಥಿಯೊಬ್ಬನ ಸಹಾಯದಿಂದ ಸಿದ್ದಶೆಟ್ಟರು ನಾನಿರುವಲ್ಲಿಗೆ ಮತ್ತೆ ಬರಲು ಸಾಧ್ಯವಾಯಿತು. ಬಹಳ ದಿನಗಳ ಕಾಲ ಅಗಲಿದ್ದ ತಂದೆ-ಮಗ ಒಬ್ಬರನ್ನೊಬ್ಬರು ಭೇಟಿಯಾದಷ್ಟು ಸಂತೋಷವಾಯಿತು. ಮತ್ತೆ ಕ್ಷೇತ್ರಕಾರ್ಯ ಪ್ರಾರಂಭವಾಯಿತು. ಮತ್ತೆ ಮತ್ತೆ ಬರುತ್ತಿದ್ದ ಸಿದ್ದಶೆಟ್ಟರಿಗೆ ನನಗಿದ್ದ ತೊಡಕು ತಾಪತ್ರಯಗಳನ್ನು ಕಣ್ಣಾರೆ ಕಾಣುವಂತಾಯ್ತು. ಅವರು ನನಗಾಗಿ ಕರಗುತ್ತಿದ್ದರು, ಕೊರಗುತ್ತಿದ್ದರು. ಸಮಾಧಾನ ಹೇಳಿ ಸಂತೈಸುತ್ತಿದ್ದರು. ೧೯೮೬ರ ಹೊತ್ತಿಗೆ ಮಹಾಭಾರತ ಪೂರ್ಣವಾಗಿತ್ತು. ಜನಪದ ರಾಮಾಯಣವನ್ನೂ ಅವರು ಹಾಡುತ್ತೇನೆಂದರು. ಈಗ ಸಂಗ್ರಹಿಸಿಟ್ಟುಕೊಂಡಿರುವ ಕಾವ್ಯಗಳನ್ನೇ

ಪ್ರಕಟಿಸುವುದಕ್ಕೆ ಸಾಧ್ಯವಿಲ್ಲದಿರುವಾಗ ಆರ್ಥಿಕವಾಗಿಯೂ ಹದಗೆಟ್ಟ ಸ್ಥಿತಿಯಲ್ಲಿದ್ದ ನನಗೆ ಅವುಗಳನ್ನೆಲ್ಲ ಸಂಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಂಥ ಸ್ಥಿತಿಯಲ್ಲೂ ಎಲ್ಲಮ್ಮನನ್ನು ಕುರಿತ ಕಾವ್ಯ ಬರೆದುಕೊಂಡೆ.

ಸಿದ್ದಶೆಟ್ಟರು ತಮ್ಮ ಸಹಧರ್ಮಿಣಿ ಸುಬ್ಬಮ್ಮನವರನ್ನು ಕಳೆದುಕೊಂಡ ಮೇಲೂ ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಕೆಲವು ದಿನಗಳು ನಮ್ಮ ಜೊತೆಯಲ್ಲೇ ಉಳಿದುಬಿಡುತ್ತಿದ್ದರು. ಅವರು ಮತ್ತೊಂದು ಸಲ ಬಂದಾಗ ಒಂದು ರುದ್ರಾಕ್ಷಿಯನ್ನು ನನ್ನ ಕುತ್ತಿಗೆಗೆ ಕಟ್ಟಿದರು. ಹಾವು ಕಚ್ಚಿದ್ದಕ್ಕೆ ಔಷಧ ಎಂದು ಹೇಳಿ ಒಂದು ಮೂಲಿಕೆಯನ್ನು 'ಇಟ್ಟರಿ' ಎಂದು ಹೇಳಿಕೊಟ್ಟರು. ಒಂದು ಉಡದ ಚರ್ಮವನ್ನು ಕೊಟ್ಟು 'ಇದರಲ್ಲಿ ದಮ್ಮಡಿ ಮಾಡಿಸಿ' ಎಂದು ಹೇಳಿದರು. ಹೀಗೆ ಹೋದ ಸಿದ್ದಶೆಟ್ಟರು ಅನಂತರ ಬಹಳ ದಿನಗಳಾದರೂ ನಮ್ಮಲ್ಲಿಗೆ ಬರಲೇ ಇಲ್ಲ. ಬಹುಶಃ ಊರಿನಲ್ಲಿ ಹಿರಿಯ ಮಗನ ಹತ್ತಿರವಿರಬಹುದೆಂದು ನಾನು ನೆನೆಸಿದ್ದೆ.

ಈ ಹಿಂದೆ ಮಹಾರಾಜ ಕಾಲೇಜಿನಲ್ಲಿ ನನ್ನ ವಿದ್ಯಾರ್ಥಿಯಾಗಿದ್ದ ಬೆಟ್ಟದಬೀಡಿನ ಬೋರೇಗೌಡ ಎಂಬುವರು ಭೇಟಿಯಾದರು. ನಾನು ಆ ಈ ಮಾತಾಡುತ್ತ 'ನಮ್ಮ ಸಿದ್ದಶೆಟ್ಟಿ ಹೇಗಿದ್ದಾರಪ್ಪ?' ಎಂದು ಕೇಳಿದೆ. ಕೂಡಲೆ ಬೋರೇಗೌಡರ ಮುಖ ಸಪ್ಪಗಾಯಿತು. ಉತ್ಸಾಹಗುಂದಿದಂತಾದ ಅವರು ಬಿಸುಸುಯ್ದರು. ನನಗೆ ಸಿಡಿಲು ಬಡಿದಂತಾಯ್ತು. ಆತ್ಮೀಯ ಬಂಧುವನ್ನು ಕಳೆದುಕೊಂಡ ಯಾತನೆ ಎದೆಯನ್ನೆಲ್ಲ ತುಂಬಿಕೊಂಡಿತು. ಆ ದಿನವೆಲ್ಲ ಅಶಾಂತಿಯಿಂದ ಕೊರಗಿದೆ. ಕೊನೇಪಕ್ಷ ಸಿದ್ದಶೆಟ್ಟರ ಭಾವಚಿತ್ರವನ್ನಾದರೂ ಉಳಿಸಿಕೊಳ್ಳೋಣವೆಂದು ಅವರಿಗೆ ಮಾಸಾಶನ ಕೊಡಿಸಲು ಅರ್ಜಿಗೆ ಲಗತ್ತಿಸಲೆಂದು ತೆಗೆಸಿದ್ದ ಫೋಟೋ ಸ್ಟುಡಿಯೋಗೆ ಓಡಿದೆ. ಒಂಟಿಕೊಪ್ಪಲಿನಲ್ಲಿದ್ದ ಆ ಸ್ಟುಡಿಯೋ ಮುಚ್ಚಿಹೋಗಿ ಬಹಳ ವರ್ಷಗಳೇ ಆಗಿದ್ದವು. ಆ ಸ್ಟುಡಿಯೋ ಮಾಲೀಕ ಯಾರು? ಅವರ ಹೆಸರೇನು? ಅವರು ಎಲ್ಲಿದ್ದಾರೆ? ಎಂಬ ಯಾವೊಂದು ಮಾಹಿತಿಯೂ ಸ್ಪಷ್ಟವಾಗಿ ತಿಳಿಯಲಿಲ್ಲ. ತಂದೆಯನ್ನು ಕಳೆದುಕೊಂಡ ಅನಾಥನಂತೆ

ನಿರಾಶೆಯಿಂದ ಹಿಂದಿರುಗಿದೆ.

ಅದೊಂದು ದಿನ. ಆಕಸ್ಮಿಕವಾಗಿ ಹೆಗ್ಗಡದೇವನ ಕೋಟೆಯ ಟ್ರೆಜರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ನನ್ನ ವಿದ್ಯಾರ್ಥಿ ಬೆಟ್ಟದ ಬೀಡಿನ ಬಸವೇಗೌಡರ ಮಕ್ಕಳಾದ ಸಿದ್ದೇಗೌಡ ಅವರು ಸಿಕ್ಕಿದರು. ನಾನು 'ಲೋ ಅಣ್ಣ, ಈಗ ಏನ್ ಮಾಡ್ತಾ ಇದ್ದಿ?" ಎಂದು ಕೇಳಿದೆ. ಅದಕ್ಕವರು 'ಕೋಟೇ ಟ್ರೆಜರಿಯಲ್ಲಿ ಎಫ್‌ಡಿಸಿ ಆಗಿದ್ದೀನಿ ಸಾ' ಅಂದರು. ಆ ಮಾತನ್ನು ಕೇಳಿದ ಕೂಡಲೆ ನನಗೆ ಏನೋ ಹೊಳೆದಂತಾಗಿ 'ಹಾಗಾದ್ರೆ ನನಗೊಂದ್ ಸಹಾಯ ಮಾಡ್ತೀಯ?' 'ಅದೇನ್ ಹೇಳಿ ಸಾ' 'ನಿಮ್ಮೂರಿನ ಕಲಾವಿದ ಸಿದ್ದಶೆಟ್ಟರಿಗೆ ಮಾಸಾಶನ ಕೊಡಿಸಲು ತಾಲ್ಲೂಕಾಫೀಸಿಗೆ ಅರ್ಜಿ ಸಲ್ಲಿಸಿದ್ದೊ. ಅವರಿಗೆ ಮಾಸಾಶ್ನ ಬರ್ತಿತ್ತು. ಅವರ ಮೂರು ಪಾಸ್‌ಪೋರ್ಟ್ ಸೈಜ್ ಫೋಟೋಗಳನ್ನು ಆ ಅರ್ಜಿಯ ತ್ರಿಪ್ರತಿಗಳಿಗೆ ಅಂಟಿಸಲಾಗಿತ್ತು. ಆ ಅರ್ಜಿಗಳಲ್ಲಿ ಒಂದು ಪ್ರತಿ ಅಲ್ಲಿದ್ದಲ್ಲಿ ಅದಕ್ಕೆ ಅಂಟಿಸಿರೋ ಸಿದ್ದಶೆಟ್ಟರ ಫೋಟೋ ತಂದು ಕೊಡೋದಕ್ಕಾಗುತ್ತಾ?' 'ಸಾ ಖಂಡಿತ ತಂದುಕೊಡ್ತೀನಿ'. 'ಅದನ್ನ ತಂದುಕೊಟ್ರೆ ನಿನಗೆ ಐನೂರು ರೂಪಾಯಿ ಕೊಡ್ತೀನಿ'. 'ದುಡ್ಡೇನೂ ಬ್ಯಾಡ ಸಾರ್. ನಾನು ಆ ಫೋಟೋವನ್ನು ನಿಮಗೆ ತಲುಪಿಸುವ ವ್ಯವಸ್ಥೆ ಮಾಡ್ತೇನೆ' ಎಂದು ಹೇಳಿದರು. ಸಿದ್ದೇಗೌಡರು ಮಾತಿಗೆ ತಪ್ಪಲಿಲ್ಲ. ಒಂದು ದಿನ ಬೆಟ್ಟದ ಬೀಡಿನ ವೆಂಕಟೇಗೌಡರ ಮಗ ಶಿವರಾಜು ಮತ್ತು ಕೆಂಪೇಗೌಡರ ಮಗ ಶಿವಕುಮಾರರು – ಈ ಇಬ್ಬರು ಸಿದ್ದೇಗೌಡರು ಕಳಿಸಿಕೊಟ್ಟಿದ್ದ ಸಿದ್ದಶೆಟ್ಟರ ಭಾವಚಿತ್ರವನ್ನು ತಂದು ನನಗೆ ತಲುಪಿಸಿದರು. ನನ್ನ ಪ್ರಿಯ ವಿದ್ಯಾರ್ಥಿಗಳ ಶ್ರದ್ಧೆಯಿಂದ ಸಿದ್ದಶೆಟ್ಟರ ಭಾವಚಿತ್ರ ನನಗೆ ಸಿಕ್ಕಾಗ ಆದ ಸಂತೋಷ ಅಷ್ಟಿಷ್ಟಲ್ಲ. ಈ ಪುಟ್ಟ ಭಾವಚಿತ್ರವನ್ನು ಕ್ಯಾತಮಾರನಹಳ್ಳಿಯ ಫೋಟೋಗ್ರಾಫರ್ (ರಾಮನ್ ಸ್ಟುಡಿಯೋದಲ್ಲಿದ್ದ ನೌಕರ) ಮಂಜುನಾಥ್ ಅವರ ಮಗ ಎಂ.ಶ್ರೀನಿವಾಸ್ ಎನ್‌ಲಾರ್ಜ್ ಮಾಡಿಸಿಕೊಟ್ಟರು. ಇತ್ತೀಚೆಗಷ್ಟೇ ಆ ಚಿತ್ರವನ್ನು ಬಣ್ಣದ ಚಿತ್ರವನ್ನಾಗಿ

ಪರಿವರ್ತಿಸಿಕೊಟ್ಟವರು ವಿಸ್ಮಯ ಗ್ರಾಫಿಕ್ಸ್‌ನ ಪ್ರಕಾಶ ಚಿಕ್ಕಪಾಳ್ಯ ಅವರು. ಈ ಬಣ್ಣದ ಚಿತ್ರವನ್ನು ಪ್ರತಿ ಮಾಡಿಸಿ ಸಿದ್ದಶೆಟ್ಟರ ಐವರು ಮಕ್ಕಳಿಗೂ ಐದು ಪ್ರತಿಗಳನ್ನು ಕಟ್ಟು ಹಾಕಿಸಿಕೊಟ್ಟೆನು. ಅದೇ ಚಿತ್ರವನ್ನು ಈ ಪುಸ್ತಕದಲ್ಲೂ ಉಪಯೋಗಿಸಿಕೊಳ್ಳಲಾಗಿದೆ.

ಇಷ್ಟಾದರೂ ಬೆಟ್ಟದಬೀಡಿಗೆ ಹೋಗಲು ಕಾಲ ಕೂಡಿ ಬರಲೇ ಇಲ್ಲ. ಬೆಟ್ಟದಬೀಡಿಗೆ ಹೋಗಬೇಕು. ಸಿದ್ದಶೆಟ್ಟರ ಮಕ್ಕಳು ಬೆಟ್ಟದಬೀಡಿನಲ್ಲಿಯೇ ಇದ್ದಾರೆಯೆ? ಅಥವಾ ಬೇರೆ ಎಲ್ಲಿಯಾದರೂ ಇದ್ದಾರೆಯೆ? ಇದ್ದರೆ ಅವರು ಏನು ಮಾಡಿಕೊಂಡಿದ್ದಾರೆ? ಹೋಗಿ ನೋಡಬೇಕು. ಆ ಊರವರನ್ನು ವಿಚಾರಿಸಬೇಕು ಎನ್ನಿಸಿದರೂ ಸಾಧ್ಯವಾಗಲೇ ಇಲ್ಲ. ಒಮ್ಮೆ ಗೆಳೆಯ ಹುಲಿಕೆರೆ ಮಹೇಶ್ ಜೊತೆ ಈ ವಿಷಯ ಹೇಳಿದಾಗ ಅವರು ಈ ವಾರವೇ ಹೋಗೋಣ ಎಂದು ಹೇಳಿದ್ದು ಮಾತ್ರವಲ್ಲ, ಆ ಭಾನುವಾರವೇ ಬೆಟ್ಟದ ಬೀಡನ್ನು ತಲುಪಿದೆವು.

ಮೊತ್ತಮೊದಲಿಗೆ ಬೆಟ್ಟದ ಬೀಡಿಗೆ ಹೋಗಿದ್ದರಿಂದ ಅಂಗಡಿಯೊಂದರ ಮುಂದೆ ಬೈಕ್ ನಿಲ್ಲಿಸಿ ವಿಚಾರಿಸಿದಾಗ ಗವೀಗೌಡ ಎಂಬುವರು ನಮ್ಮನ್ನು ಸಿದ್ದಶೆಟ್ಟರ ಮಗಳ ಮನೆಗೆ ಕರೆದುಕೊಂಡು ಹೋದರು. ಅಲ್ಲಿಗೆ ದೇವೇಗೌಡರ ಮಗಳು ಕೆಂಪಮ್ಮ ಬಂದರು. ಅವರು ಸಿದ್ದಶೆಟ್ಟಿಯವರ ಪತ್ನಿ ಸುಬ್ಬಮ್ಮನವರ ಆತ್ಮೀಯ ಗೆಳತಿ. ಅವರೇ ಗಾಯಕನ ಮಗ ಮಾದಶೆಟ್ಟಿಯನ್ನು ಕರೆದುಕೊಂಡು ಬಂದರು. ಮಾದಶೆಟ್ಟಿ ಹಿಂದೊಮ್ಮೆ ಅವರ ತಂದೆಯ ಜೊತೆ ನಮ್ಮ ಮನೆಗೆ ಬಂದಿದ್ದರಿಂದ ಮುಖಪರಿಚಯವಿತ್ತು. ಬಂದ ಆತನಿಗೂ ಆಶ್ಚರ್ಯವಾಯ್ತು. ಆನಂದದಿಂದ ನಮ್ಮನ್ನು ಮಾತನಾಡಿಸಿ ಬಹಳಷ್ಟು ವಿಚಾರಗಳನ್ನು ಹೇಳುತ್ತ ತಮ್ಮ ತಂದೆಯ ಕೊನೆಯ ದಿನದ ಬಗೆಗೆ ಹೀಗೆ ವಿವರಿಸಿದರು:

"ನಮ್ಮಪ್ಪ ನನ್ನ ಜೊತೇಲಿ ತೋಣಚಿ ಕೊಪ್ಪಲಿನಲ್ಲಿ ಇದ್ದರು. 'ನೀನು ಎಲ್ಲಿರ್ತೀಯೋ ಅಲ್ಲೇ ನಾನಿರ್ತೀನಿ. ಆದ್ರೆ ನಾನು ಯಾವಾಗ

ಅನ್ನ ನೀರು ಬಿಟ್ಟು ಸಾಯೋ ಸ್ಥಿತಿಗೆ ಬತ್ತೀನೋ ಆಗ ಬೆಟ್ಟದಬೀಡಿಗೆ ಕರುಕೊಂಡೋಗಪ್ಪ' ಅಂತ ಹೇಳಿದ್ದರು. ಯಾವಾಗ ಇವುರ್ಗೆ 'ನಾನಿನ್ನು ಬದುಕೋದಿಲ್ಲ' ಅನ್ನುಸ್ತೋ ಆವಾಗ 'ನನ್ನ ಊರ್ಗೆ ಕರ್ಕೊಂಡೋಗಪ್ಪ. ನಾನು ಆ ಊರಲ್ಲೇ ಸಾಯ್ಬೇಕು. ಆ ಮಣ್ಣಲ್ಲೇ ಸೇರೋಗ್ಬೇಕು' ಅಂದ್ರು. ನಾನಾಗ ಶಂಕರಪ್ಪ ಎಂಬುವರ ತೋಟದಲ್ಲಿ ಕೆಲಸ ಮಾಡ್ತಿದ್ದೆ. ತಕ್ಷಣವೇ ಆಟೋ ಮಾಡ್ಕೊಂಡು ಕರುಕೊಂಡು ಬಂದೆ. ಊರು ಜನವೆಲ್ಲ ಸೇರ್ತು. ಎಲ್ರೂ ನೋಡುದ್ರು. ಕೊನೇ ಘಳಿಗೇಲಿ ಎಲ್ರೂ ಬಾಯಿಗೆ ನೀರು ಬುಟ್ರು. ಊರು ಜನನೆಲ್ಲ ಕಣ್ತುಂಬ ನೋಡಿ ನೆಮ್ಮದಿಯಿಂದ ಕಣ್ಣುಮುಚ್ಚುದ್ರು ಆಗ ನಮ್ಮಪ್ಪ" ಎಂದು ಹೇಳುತ್ತ ಬಿಕ್ಕಿ ಬಿಕ್ಕಿ ಅಳತೊಡಗಿದರು.

ಆಗ ಕೆಂಪಮ್ಮ "ಸಿದ್ದಶೆಟ್ರು ನಮ್ಮೂರಲ್ಲೇ ಸಾಯ್ಬೇಕು ಅಂತ ಬಂದುದ್ದು, ಅವುರ್ಗೆ ನಮ್ಮ ಊರು ಕಂಡ್ರೆ ಎಷ್ಟು ಪ್ರೀತಿ ಅಂತ್ಹೇಳಿ ನಮುಗೆಲ್ಲ ದುಕ್ಕ ಒತ್ರುಸ್ಕೊಂಡು ಬತ್ತು. ನಾವೆಲ್ಲ ನಮ್ಮ ಬಳಗದವುರೇ ಸತ್ತಂಗೆ ಗೋಳಾಡ್ದೊ. ನಮ್ಮೂರಿಗೆ ಬಂದು ನಮ್ಮೂರವರೇ ಆಗಿ ನಮ್ಮ ಜೊತೇಲಿ ಬಾಳಾಡುದ್ರು. ಅವರ ಹೆಂಡ್ತಿ ಸತ್ತ ಒಂದು ವರ್ಷಕ್ಕೆ ಶೆಟ್ರು ತೀರ್ಕೊಂಡ್ರು (೧೯೮೯). ನಮ್ಮ ಗೌಡಗಳೆಲ್ಲ ಸೇರಿ ಅವುರ್ನ ನಮ್ಮ ಹೊಲದಲ್ಲಿ (ಗವೀಗೌಡರ ಪುಟ್ಟೇಗೌಡನ ಹೊಲ) ಒಪ್ಪ ಮಾಡುದ್ರು. ಊರವುರೆಲ್ಲ ಸೇರಿ ತಿಥಿ ಮಾಡುದ್ರು. ಊರಿಗೆಲ್ಲ ಒಬ್ಬನೇ ಒಬ್ಬ ಮಹಾವ್ಯಕ್ತಿ ಅನ್ನಿಸಿಕೊಂಡಿದ್ದ ಸಿದ್ದಶೆಟ್ರು ತೀರಿಕೊಂಡಾಗ ನಮ್ಮೂರಿನ ಕಳೇನೇ ಹೊಂಟೋದಂಗಾಯ್ತು. ಅವ್ರು ಗುರುಸ್ಥಾನದಲ್ಲಿದ್ದರು, ತಂದೆ ಸ್ಥಾನದಲ್ಲಿದ್ರು, ದೇವರಂಗಿದ್ರು. ಅಂಥಾ ಮನುಸ್ನ ಮತ್ತೆ ನಾವು ಕಾಣುಕಾಯ್ತದ? ನಾವೆಲ್ಲ ಅವುರ್ನ ನಮ್ಮ ಮನೆಯ ಒಬ್ಬ ಹಿರೀಕ್ರು ಅಂದ್ಕೊಂಡಿದ್ವೇ ಹೊರ್ತು ಬೇರೆಯವರು ಅಂತ ಭಾವಿಸಿರ್ಲಿಲ್ಲ!' ಎಂದು ಹೇಳಿ ಮೌನವಾದರು.

ಬೆಟ್ಟದಬೀಡಿನ ಮಣ್ಣಿನಲ್ಲಿ ಸೇರಿಹೋದ–ಆದರೆ–ನಾಡಿಗೊಂದು ಅಪೂರ್ವ ಕೊಡುಗೆಯಾಗಿ ಜನಪದ ಮಹಾಭಾರತವನ್ನು ಬಿಟ್ಟು ಹೋದ ಸಿದ್ದಶೆಟ್ಟರ ನೆನಪು ಹೃದಯವನ್ನು ತುಂಬಿಕೊಂಡಿತ್ತು. ಬೆಟ್ಟದಬೀಡಿನ

ಬೆಟ್ಟದ ಜೀವದಂತಿದ್ದ ಸಿದ್ದಶೆಟ್ಟಿಯವರ ಬಗೆಗೆ ಇಟ್ಟುಕೊಂಡಿದ್ದ ಪ್ರೀತಿ, ಅಭಿಮಾನಗಳು ಆ ಊರವರ ನಾಲಿಗೆಯ ಮೇಲೆ ನರ್ತಿಸುತ್ತಿತ್ತು. ಸಿದ್ದಶೆಟ್ಟರ ಬದುಕು ಸಾರ್ಥಕ ಎನಿಸಿತು. ಅವರ ನಿರ್ಮಲ ವ್ಯಕ್ತಿತ್ವದ ಕಥನವನ್ನು ಕೇಳಿ ಪುಳಕಗೊಂಡಿದ್ದ ನಾವು ನಮ್ಮ ಭುವನದ ಭಾಗ್ಯವೆನಿಸಿದ ಸಿದ್ದಶೆಟ್ಟರನ್ನು ತನ್ನಲ್ಲಿ ಆಲಂಗಿಸಿಕೊಂಡ ಬೆಟ್ಟದಬೀಡಿನ ನೆಲದ ಹುಡಿಯನ್ನು ಹಣೆಗಿಟ್ಟುಕೊಂಡು ಕೃತಜ್ಞತೆಯಿಂದ ನಮಸ್ಕರಿಸುತ್ತ ಮೈಸೂರಿಗೆ ಮರಳಿದೆವು.

ಜನಪದ ಮಹಾಭಾರತ

ಬೆಟ್ಟದಬೀಡು ಸಿದ್ದಶೆಟ್ಟರು ಹಾಡಿರುವ ಜನಪದ ಮಹಾಭಾರತವನ್ನು ಪಂಪನ ಪರಿಭಾಷೆಯಲ್ಲಿ ಹೇಳುವುದಾದರೆ ಅದು 'ಸಮಸ್ತ ಭಾರತ'. ನೆಲದ ಮಕ್ಕಳ ಸಂಸ್ಕೃತಿಯ ಪ್ರತೀಕವಾಗಿರುವ ಈ ಭಾರತ ಕೆಲವೊಮ್ಮೆ ಕೃಷಿಕ ಭಾರತದಂತೆ, ಕೆಲವೊಮ್ಮೆ ಶಾಕ್ತ ಭಾರತದಂತೆ ಮತ್ತೆ ಕೆಲವು ಸಲ ಜೋಗಿ ಭಾರತದಂತೆ ಕಾಣಿಸುತ್ತದೆ. ಇಲ್ಲಿ ಬರುವ ಪಾತ್ರಗಳು ಮೂಲ ಭಾರತದ ಹೆಸರುಗಳೇ ಆದರೂ ಇಲ್ಲಿನ ಕಥಾ ಭಾಗಗಳು ವ್ಯಾಸಭಾರತವನ್ನು ಮೀರಿದ ಹೊಸ ಬಗೆಯ ಕಥೆಗಳಿಂದ ಕುತೂಹಲಕಾರಿಯಾಗಿವೆ. ಪ್ರತಿಯೊಂದು ಸಂಗತಿಗೂ ಕಾರ್ಯಕಾರಣ ಸಂಬಂಧವನ್ನು ಹೇಳುವ ಇಲ್ಲಿನ ವಿವರಣಾತ್ಮಕ ಕಥೆಗಳು ವಿಸ್ಮಯ ಲೋಕವನ್ನು ಸೃಷ್ಟಿಸುವ ವಿನೂತನ ರೀತಿಯವಾಗಿವೆ. ಮೂಲ ಭಾರತವನ್ನು ಓದಿದಾಗ ಏಳುತ್ತಿದ್ದ ಅನೇಕ ಪ್ರಶ್ನೆಗಳಿಗೆ ಇಲ್ಲಿ ವಿಶಿಷ್ಟ ರೀತಿಯ ಉತ್ತರಗಳನ್ನು ಹೇಳಲಾಗಿದೆ. ಇದು ಗ್ರಾಮೀಣರ ಬುದ್ಧಿಶಕ್ತಿಗೆ, ಪ್ರತಿಭಾ ಸಾಮರ್ಥ್ಯಕ್ಕೆ ಜೀವನಶೈಲಿಗೆ ಹಿಡಿದ ಹೆಗ್ಗನ್ನಡಿಯಾಗಿದೆ; ಅಂತೆಯೇ ಜನಪದ ಸಂಸ್ಕೃತಿ ಸೌಧದ ಹೆಗ್ಗಂಬವೂ ಆಗಿದೆ.

ಪಾಂಡವರು ಅವರೆ ಪರ್ವ

ಹರಹರ ಹರನೆ ಜಯತೊ – ಹರಮೂರು

ಪುರವ ಗೆದ್ದವನೆ ಜಯತೊ
ಉರಗಭೂಷಣ ಜಯತೊ ಗರಳಕಂಧರ ಜಯತೊ
ಗಿರಿಜಾಶಂಕರನೆ ಜಯತೊ । ಸೊಲ್ಲು ।

ಗಾಂಧಾರಿ ದೃತುರಾಷ್ಟ್ರರು – ಕೊಂತಮ್ಮ
ವಿದುರಾನು ಸೆಂಜೇಯರು
ಲೋಕದಲ್ಲಿ ಕಂಡದ್ದು ಉಂಡಿದ್ದು ನೋಡಿದ್ದು
ಸಾಕು ಸಾಕೆಂದರಾಗ ।

ವನಕೆ ನಾವೊರಡಬೇಕು–ಆಶ್ರಮದ
ಜೀವನವ ನಡೆಸಬೇಕು
ತ್ರಪಸ ಮಾಡಲು ಬೇಕು ಮುಕುತಿ ಪಡೆಯಲು ಬೇಕು
ಪರಮಾತ್ಮನ ಕಾಣಬೇಕು ।

ಹೊರಟು ನಿಂತಾಗ ವನಕೆ – ಕೊಂತ್ಯಮ್ಮ
ಪುತ್ತರರ ಕರೆದಳಾಗ
ಕುಂತಲ್ಲಿ ನಿಂತಲ್ಲಿ ಕೊಂತಮ್ಮನ ಮಕ್ಕಳ
ಹೆಸರುಳಿಯಬೇಕಂದಳು – ಕೊಂತ್ಯಮ್ಮ
ಹೆಸರು ಕಾಳೆರಚಿದಳು ।

ವನಕೆ ಹೋಗುವ ಹೊತ್ತಲಿ – ಕೊಂತಮ್ಮ
ವೊಳ್ಳಿಂದ ಅವರೆಕಾಳ
ತಗುದ ಧರ್ಮರ ಕೈಗೆ ಕೊಡುತ ಅಂದಳು ಕೊಂತಿ
ಪಾಂಡವರು ಅವರೆ ಅವರೆ ।

ಪಾಂಡವರು ಅವರೆ ಅವರೆ – ಮಕ್ಕಳೆ
ಪಾಂಡವರು ಅವರೆ ಅಂತ
ಜಗತಿಳಿದುಕೊಳ್ಳಲಿ ಅವರೆ ಬಿತ್ತೀರಂತ

ಅವರೆಕಾಳನು ಕೊಟ್ಟಳು – ಕೊಂತ್ಯಮ್ಮ
ಅವರೆ ಬಿತ್ತಿರಿ ಅಂದಳು ।

"ಧರುಂರಾಯ ತಕ್ಕೊಳ್ಳಪ್ಪ ಈ ಅವರೆ ಕಾಳ್ಗಳ
ಗಜಗೌರಿರೊತ ಮಾಡುವಾಗ
ದೇವ್ಲೋಕದಿಂದ ಬಂದಿದ್ದ ಕಾಳುಗಳಲ್ಲಿ
ಈ ಅವರೆ ಕಾಳು ಪಾಂಡವರು ತಕೊಂಡಿದ್ದು
ನಾನು ಈ ನೆಲದ ಮಗಳು
ಈ ನೆಲದ ಮೇಲೆ ನ್ಯಾಯನೀತಿ ಸತ್ಯಧರ್ಮಗಳು ಇರೋನ್ಗಂಟ
ಪಾಂಡವರು ಅವರೆ ಅಂತ
ಈ ಅವುರೆಕಾಳ ನೋಡ್ಕೊಂಡು
ಜಗತ್ಯದ ಜನ ತಿಳುಕೊಳ್ಳಿ ಕಾಣ್ರಪ್ಪ
ಪಾಂಡವರು ಧರ್ಮಕ್ಕಾಗಿ ಹೋರಾಡ್ದೋರು ಅನ್ನುವಂತಾದ್ದಕ್ಕೆ
ಈ ಅವರೆಕಾಳು ಸಾಕ್ಷಿ ಆಗಿರಲ್ರಪ್ಪ
ನಿಮುಗೆ ಒಳ್ಳೇದಾಗಲಿ
ನಾವಿನ್ನು ಗಿಡೀಗೆ ಹೋಯ್ತಿದ್ದೀವಿ
ನಿಮ್ಮ ಹೆಸರು ಹಸುರಾಗಿರಲಿ ಕಣ್ರಪ್ಪ"
ಅಂತ್ಹೇಳಿ ಮಕ್ಕುಳ್ಗೆ ಆಸುರ್ವಾದ ಮಾಡುದ್ಲು
ಗಾಂಧಾರಿ ದ್ರುತುರಾಷ್ಟ್ರ ವಿದುರ ಸೆಂಜೇಯರು
ಕೊಂತಮ್ಮನ ಕರ್ಕೊಂಡು ಕಾಡುದಾರಿ ಹಿಡುದ್ರು
ಧರುಂರಾಯ ಒಂದು ಗಳುಗೆ ಕಣ್ಮುಚ್ಚುಕೊಂಡು
ನಿಂತಿದ್ದೋನು
ಆತ್ರುಸ್ದಂಗೆ ಕಣ್ಬುಟ್ಟು
"ಭೀಮಾರ್ಜುನರೆ ನಕುಲ ಸಾದೇವರೆ
ದ್ರೋಪತಾ ಹೊರಡಿ ಹೊರಡಿ
ನಾವು ಸೊರ್ಗಾರೋಣ ಮಾಡ್ಬೇಕು" ಅಂತ್ಹೇಳಿ

ತುದುಗಾಲಲ್ಲಿ ಹೊಂಟು ನಿಂತ್ರು –

ಪಾಂಡವರು ಸೊರ್ಗ್ಗಾರೋಣ – ಮಾಡುವರು
ಅನುತ್ತೇಳಿ ಊರ ಜನರು
ಅರಮನೆಯ ಬಾಕಲಲಿ ಬಂದು ನಿಂತಿರುವಾಗ
ಕರವೆತ್ತಿ ಕೈ ಮುಗುದರು – ಧರ್ಮರು
ಕರವೆತ್ತಿ ಕೈ ಮುಗುದರು ।

ಧರುಂರಾಯ ಕೈಯ ಮುಗುದು – ಬಂದೋರ್ಗೆಲ್ಲ
ಕೇಳೀದ ವಸ್ತೂಗಳ
ಕೇಳೀದ ವಸ್ತ್ರಗಳ ಕೇಳೀದ ವಡವೆಗಳ
ತೆಗೆತೆಗೆದು ಕೊಡುತ್ತಿದ್ದರು – ಧರ್ಮರು
ತೆಗೆತೆಗೆದು ಕೊಡುತ್ತಿದ್ದರು ।

ಮುತ್ತು ರತ್ನವ ಕೊಟ್ಟರು – ಪಾಂಡವರು
ವಜ್ರ ವೈಡೂರ್ಯ ಕೊಟ್ಟರು
ಲಗಲಾಣ್ಯ ಕೊಟ್ಟರು ಗೋವುಗಳ ಕೊಟ್ಟರು
ಬೇಕಾದುದನ್ನೆ ಕೊಟ್ಟರು – ಪಾಂಡವರು
ಕೇಳಿದುದನೆ ಕೊಟ್ಟರು ।

ಛತ್ರ ಚಾಮರ ಕೊಟ್ಟರು – ಪಾಂಡವರು
ಸತ್ತೀಗೆ ಸೂರಿಪಾನಿ
ರಥಕುದುರೆ ಆನೆಗಳ ಬೆಲೆಬಾಳೂ ವಸ್ತುಗಳ
ಕೇಳಿದವರಿಗೆ ಕೊಟ್ಟರು ।

ಹೂವೀನ ಮಳೆ ಸುರಿಯಿತು – ಆಕಾಸ್ದ
ತುಂಬೆಲ್ಲ ಹೂವಾಯಿತು
ಸಿದ್ದರು ಸಾಧ್ಯರು ಯಕ್ಷ ಕಿನ್ನರರೆಲ್ಲ

ಹೂವುಗಳ ಮಳೆ ಕರೆದರು ।

ಹಸ್ತೀನಾಪುರವ ಬಿಟ್ಟು – ಪಾಂಡವರು
ಊರ ಬಾಕಲಿಗೆ ಬರಲು
ಹೊಲಗದ್ದೆ ತೋಟದಲಿ ಗೇಯುತಿದ್ದ ರೈತರು
ನೋಡಿ ಓಡೋಡಿ ಬಂದರು ।

"ಸ್ವಾಮಿ ನೀವು ಸೊರ್ಗ್ಗಾರೋಣ ಮಾಡಕೆ ಹೊಂಟಿದ್ದೀರಿ
ಅಂತ ತಿಳೀತು ನೀವು ಸತ್ಯವಂತರು ಧರ್ಮಾತ್ಮರು
ನ್ಯಾಯನೀತಿ ಬಲ್ಲೋರು
ನೀವು ನಮ್ಮನ್ನ ಬಿಟ್ಟು ಹೋದರೆ
ನಿಮ್ಮ ಜೊತೆ ಸತ್ಯಧರ್ಮ ನ್ಯಾಯನೀತಿ ಒಂದೂ ಉಳೀದಂತೆ
ಈ ಧರಣಿ ನಾಶನಾಗುವುದಿಲ್ಲವೆ?
ನಮ್ಮನ್ನ ಮಾತ್ರ ಬಿಟ್ಟೋಗಬೇಡಿ
ಹಂಗೆ ಹೋಗ್ಲೇ ಬೇಕೂ ಅನ್ನೋದಾದ್ರೆ
ನಮ್ಮನ್ನು ನಿಮ್ಮ ಜೊತೆ ಕರ್ಕೊಂಡೋಗಿ" ಅಂದ್ರು
"ಅಪ್ಪಾ ಒಕ್ಕಲಿಗರೇ
ತಾಯಿ ಕೊಂತಮ್ಮ ಈ ನೆಲದ ಮಗಳು
ತಂದೆ ಪಾಂಡುರಾಜ ಈ ನಾಡಿನ ರಾಜ
ಅಂತಾವುರ ಮಕ್ಕಳಾದ ನಾವು
ಸೊರ್ಗ್ಗಾರೋಣ ಮಾಡ್ದೆ ಉಳಿಯೋಂಗಿಲ್ಲ
ನಾವು ಸೊರ್ಗ್ಗಾರೋಣ ಮಾಡುದ್ರೂ
ಎಂದೆಂದ್ಗೂ ನಿಮ್ಮ ಜೊತೇಲಿದ್ದೇ ಇರ್ತೀವಪ್ಪ
ಅದು ಹೆಂಗೇ ಅಂದ್ರೆ
ನೋಡಿ ನಮ್ಮ ತಾಯಿ ಕೊಂತಮ್ಮ
ಗಜಗೌರಿ ರೊತ ಮಾಡಿದಂತ ಸಮಯದಲ್ಲಿ

ದೇವುಲೋಕದಿಂದ ಬಂದ ದವಸ ಧಾನ್ಯಗಳಲ್ಲಿ
ಅವುರೆ ಕಾಳ್ಗಳ ಕೊಟ್ಟವುರೆ
ನೀವು ಸಾಲೊಡ್ಕೊಂಡೋದ್ರೆ
ನಾನು ಅವುರೇ ಕಾಳ ಬಿತ್ತುತೀನಿ
ಈ ಅವುರೇ ಕಾಳಿನ ಕಾರ್ಣದಿಂದ
ಎಲ್ಲೀವರೆಗೆ ಈ ತಾಯಿ ನೆಲದಲ್ಲಿ
ಸತ್ಯ ಧರ್ಮ ನ್ಯಾಯ ನೀತಿ ಇರ್ತದೊ
ಅಲ್ಲೀನ್ಗಂಟ ಪಾಂಡವರು ಅವರೆ ಅಂತ ತಿಳ್ಕೊಳ್ರಪ್ಪ
ನಡೀರಿ ನೀವು ಉತ್ಕೊಂಡೋಗಿ
ನಾವು ಬಿತ್ಕೊಂಡೋಯ್ತೀವಿ" ಅಂತ್ಹೇಳಿ
ಧರ್ಮರಾಯರು ಅವುರೇಕಾಳನ್ನು ಬಿತ್ಕೊಂಡೋಯ್ತಿದ್ದಾರೆ –

ಅವರೇಯ ಬಿತ್ತಿದರು – ಪಾಂಡವರು
ಅವುರೆ ಅಂತ ಸಾರಿದರು
ಅವುರೇಯ ಗಿಡ ಚಿಗಿತು ಹೂಕಚ್ಚಿ ನಗುವಾಗ
ಪಾಂಡವರ ಹೆಸರಾಯಿತು – ಜಗತ್ಯದಲಿ
ಪಾಂಡವರ ಹೆಸರಾಯಿತು ।
ರೈತರೆಲ್ಲ ಹೇಳ್ತಿದ್ದಾರೆ :
"ಕೊಂತಮ್ಮ ತಾಯಿ ನೀನು ಕೊಟ್ಟಂಥ ಈ ಅವರೆಕಾಳು
ಹೂ ಕಚ್ಚಿ ಫಲಫಲಾ ಅಂತಾ ಅದೆ
ಇದು ಕಾರ್ತೀಕಮಾಸ ನನ್ನವ್ವ
ಪ್ರತೀ ಕಾರ್ತಿಕದಲ್ಲೂ ಈ ಅವರೇಗಿಡ ಹೂಕಚ್ಚಿದಾಗ
ನಿನ್ನ–ನಿನ್ನ ಮಕ್ಳ ಸೊರಣೆ ಮಾಡಿ
ಕೊಂತಮ್ಮನ ಪೂಜೆ ಅಂತ್ಹೇಳಿ
ನಿನ್ನ ಪೂಜೆ ಮಾಡ್ತೀವಮ್ಮ" ಅಂದ್ರು –

ಇತ್ಲಾಕಡೆ ಯಮಲೋಕದ ನರಕದಲ್ಲಿ
ಶಕುನೀನೂ ದುರ್ಯೋದನನೂ
ಒಂದೇ ಒಂದು ಎಳೆ ನೂಲುನ ತಂತೀಲಿ ನ್ಯಾತಾಡ್ತಾ ಅವುರೆ
ಅವುರು ನ್ಯಾತಾಡ್ತಾ ಅವುರಲ್ಲ
ಅದರ ಕೆಳಗೆ ಮಲಮೂತ್ರದ ಗುಂಡಿ ಅದೆ
ಆ ಒಂದು ಎಳೆ ದಾರದಷ್ಟು ಪುಣ್ಯ ಅವುರ್ಗೆ ಉಳುದದೆ
ಹಿಂಗೆ ನ್ಯಾತಾಡ್ತಾ ಇರೋಗ ಶಕುನಿ
ದುರ್ಯೋದನನ್ನು ನೋಡಿ
ಇವನಿಗೆ ಇನ್ನೂ ತಕ್ಕನಾದ ಶಾಸ್ತಿ ಮಾಡಬೇಕೂಂತ್ಹೇಳಿ
"ವಸ್ತ ದುರ್ಯೋದನ
ನೀನು ಎಷ್ಟು ಹೋರಾಟ ಮಾಡಿ ಏನು ಬಂತು?
ಎಷ್ಟು ಛಲ ಮಾಡಿ ಏನು ಬಂತು?
ಅಲ್ನೋಡು ಭೂಮೀಲಿ ಧರುಂರಾಯ
ಪಾಂಡವರು 'ಅವರೆ' ಅಂತ ಅವರೇಕಾಳ ಬಿತ್ಕೊಂಡು ಬರ್ತಿದ್ದಾನೆ

ಪಾಂಡವರು ಅವರೆ ಅಂದ್ರೆ ಕೌರವರು ಇಲ್ಲ ಅಂತಲ್ಲವ?
ಹೇಳು ವಸ್ತ ಕೌರವ!"
"ಮಾವ ನಿಜ ನಾನು ಕೌರವ
ಧರ್ಮರಾಯ ಬಿತ್ಕೊಂಡು ಬರೋ ಅವರೇ ಗಿಡದ ಕಾಯ್ಗಳನೆಲ್ಲ
ನಾನು ಕವರೂವ ನಾನು ಕೌರವ

ಈಗ ನನ್ನ ಶಕ್ತಿ ಸಾಹಸಗಳ ನೋಡು
ಈಗ ನೋಡು ನಾನು ಚಿಟ್ಟೆಮಳೆ ಹುಯ್ಯಿಸ್ತೀನಿ
ಧರ್ಮರಾಯನ ಅವರೇಗಿಡಗಳ್ಗೆಲ್ಲ
ಹಸುರ್ಹುಳ ಕಂಬ್ಳಿಹುಳ ಚಿಟ್ಟೆ ಹುಳಹುಪ್ಪಿಗಳ ಉತ್ಪತ್ತಿ ಮಾಡ್ತಿದ್ದೀನಿ

ಗಿಡಗಳ್ನೆಲ್ಲ ಪುಟ್ಟುಗೆ ಹಾಳ್ಮಾಡ್ತೀನಿ

ಕಾಳ್ಗೊಳ್ಣೆಲ್ಲ ನುಣ್ಣುಗೆ ಕವುರ್ಕ್ಕೋತೀನಿ
ಹ್ಯಾಗಿದೆ ಮಾವ ನನ್ನ ತಂತು?"
"ವಸ್ತ ನಿನ್ನ ಮಾತೇ ಮಾತು
ನಿನ್ನ ಛಲವೇ ಛಲ
ನಡೀಲಿ ನಡೀಲಿ ನರಕದಲ್ಲೂ ನಿನ್ನ ದರಬಾರು!"–

ನರಕದ ಕೂಪದಲ್ಲಿ – ಕೌರವ
ಧರೆಗೆ ಮೊಕ ಮಾಡಿದನು
ಪಾಂಡವರು ಅವರೇಂತ ಅವರೆಗಿಡವಾಯ್ತೆಂದು
ಕಟಕಟನೆ ಹಲ್ಲು ಕಡಿದು – ಕೌರವ
ಕಟಕಟನೆ ಹಲ್ಲು ಕಡಿದು ।

"ಅವರೆಗಿಡ ಉಳಿಯದಂತೆ – ಪಾಂಡವರ
ಹೆಸರುಗಳು ಉಳಿಯದಂತೆ
ಚಿಟ್ಟೇಯ ಮಳೆಹೂದು ಚಿಟ್ಟೇಹುಳು ಆಗಿ
ಅವರೆಗಳ ನಾಶಮಾಡುವೆ – ನಾನಾದರೆ
ಅವರೆಗಳ ನಾಶ ಮಾಡುವೆ" ।
ಮಾವ ಒಪ್ಗೆ ಕೊಟ್ಟ ಅಂತ್ಹೇಳಿ
ಚಿಟ್ಟೆ ಮಳೆ ಹುಯ್ಸಕೆ ಸುರುಮಾಡ್ದ
ಹೂಕಚ್ಚಿ ಚೊಟ್ಟಾಗಿ ಕಾಯಾಗಿರೋ
ಅವರೆ ಗಿಡಗಳಿಗೆಲ್ಲ ಹಸ್ರುಳ ಕಂಬ್ಳೀಹುಳ
ಚಿಟ್ಟೆಹುಳ ಹುಳುಹುಪ್ಟಿಗಳು ಮುತ್ಕೊಂಡು
ಕಾಯ್ಗಳ್ನೆಲ್ಲ ಕವುರ್ಕೊತಾ ಅವೆ.
ಇದೇನು ಹಿಂಗಾಯ್ತಲ್ಲ ಅಂತ
ಧರುಂರಾಯ್ರುಗೆ ಐಚೋಜುಗವಾಯ್ತು

ಕತ್ತೆತ್ತಿ ಮೇಲುಕ್ಕೆ ನೋಡುದ್ರು
ದುರ್ಯೋಧನ ಕೇಕೆ ಹಾಕೊಂಡು ನೆಗ್ತಾ
ಚಿಟ್ಟೆ ಮಳೆ ಹುಯಿಸ್ತಾ ಇದ್ದಾನೆ.
ಆಗ ಧರುಂರಾಯ
"ವಸ್ತ ನರುಕುಕ್ಕೋದ್ರೂ ನಿನ್ನ ನೀಚ ಬುದ್ಧಿ
ಬಿಡ್ನಿಲ್ಲವಲ್ಲ ಇರ್ಲಿ –

ಎಲೋ ಎಲೋ ಕರ್ಮಾತ್ಮನೇ – ಭೇ ಕೌರವ
ನೀನು – ಚಿಟ್ಟೆ ಹುಳ ಆಗಿ ಸುರಿದರೆ
ವಿಷಾತಿ ಮಳೆಹೂದು ಚಿಟ್ಟೆ ಹುಳ ಸಾಯಿಸುವೆ
ತಿಳುಕೊಪ್ಪ ಮನಸಿನಲ್ಲಿ – ತಮ್ಮಯ್ಯ
ತಿಳುಕೊಪ್ಪ ಮನಸಿನಲ್ಲಿ" ।

ಪರಮಾತ್ಮನ ಹೆಸ್ರೇಳಿ ಧರುಂರಾಯ್ರು
ವಿಷಾತಿ ಮಳೆ ಹೊಯಿಸ್ತ್ರು
ಆಗ ಇದ್ದಬದ್ದ ಹಸ್ರುಳ ಕಂಬ್ಳಿಹುಳ ಚಿಟ್ಟ ಹುಳ ಹುಳು ಹುಪ್ಟಿಗಳೆಲ್ಲ
ಮರೆಯಾಗಿ ಹೋದ್ದೋ
ಇತ್ಲಾ ಕಡೆ ನರಕದಲ್ಲಿ ಇದ್ದಂತ ದುರ್ಯ್ಯೋದ್ನ
ಇದ್ದ ಒಂದು ಚೂರು ಪುಣ್ಯವೂ ತೀರೋಗಿ
ದಾರ ಕಿತ್ತು ಅವ್ನು ಮಲಮೂತ್ರದ ಗುಂಡಿಗೆ ಬಿದ್ದೋದ

ಅದ ನೋಡಿ ಶಕುನಿ
'ಓಹ್ಹೊಹ್ಹೊ' ಅಂತ್ಹೇಳಿ ಅಬ್ರುಸ್ಕೊಂಡು ನೆಗತಾ ಅವ್ನೆ
"ದುರ್ಯೋಧನ, ನೀನು ಕರ್ಣುಂಗೆ ಉಪಕಾರ ಮಾಡಿದ್ದಷ್ಟೇ
ನಿನ್ನ ಪುಣ್ಯ
ಅದೂ ಮುಗುದೋಗಿ ಈಗ ನೀನು
ಮಲಮೂತ್ರದ ಗುಂಡೀಲಿ ಒದ್ದಾಡ್ತ ಇರೋದ

ನೋಡಿ ನನುಗೆ ಬಾಳ ಆನಂದವಾಯತು
ನಿಂಗೆ ಹಿಂಗಾಗ್ಬೇಕು ಅಂತ್ಲೆ ನಾನು ತಂತು ಮಾಡ್ದೆ”
ಅಂತ್ಹೇಳಿ ಕೈತಪ್ಪಾಳೆ ತಟ್ಕೊಂಡು ನೆಗ್ತಾ ಅವ್ನೆ.
ದುರ್ಯೋದನ ಕ್ವೋಪದಿಂದ ಬುಸ್ಗರೀತಾ ಅವುನೆ
“ದುರ್ಯೋದನ ನೀನು ನನ್ನ ನೀಚ ಅಂತಿದ್ದೀಯೆ
ನಾನಲ್ಲ ನೀಚ ನೀನು!
ನನ್ನ ಸೋದರರ್ನೆಲ್ಲ ನಾಶನ ಮಾಡಿದ್ಕೆ
ಇದು ನನ್ನ ಸೇಡು
ಈಗ ನನಗೆ ನೆಮ್ಮದಿ ಆಯ್ತು.
ನಿನ್ನ ಎಕ್ಕುಟ್ಸಿ ಕೆಟ್ಟು ಕೆರಾ ಹಿಡಯೋಂಗೆ ಈ ದಿನ ಮಾಡಿದ್ದೀನಿ
ನನ್ನ ಅಣ್ಣಂದಿರ ಆತ್ಮಕ್ಕೆ ಸಾಂತಿ ಸಿಕ್ತು
ಇವತ್ತು ಸಾಂತಿ ಸಿಕ್ತು
ಯಾಕೆ ಹಂಗೆ ಕೆಕ್ಕುರುಸ್ಕೊಂಡು ನೋಡ್ತೀಯೆ?
ಈಗ ನೀನು ನನ್ನ ಏನೂ ಮಾಡ್ಲಾರಿ
ಅದಿರ್ಲಿ ನೀನು ಆ ಗುಂಡಿಯಿಂದ
ಮೇಲುಕ್ಕೆ ಬರ್ಬೇಕಾ ಬೇಡವ?”
ದುರ್ಯೋದನ ಹಲ್‌ಹಲ್ ಕಡೀತ “ಬರ್ಬೇಕು” ಅಂದ
“ಹಂಗಾದ್ಮೇಕೆ ನಾನು ಹೇಳುದಂತೆ ಹೇಳುದ್ರೆ
ತಿರ್ಗಾ ಪುಣ್ಯ ಪ್ರಾಪ್ತುವಾಗಿ
ನೀನು ಮೇಲುಕ್ಕೆ ಬರ್ತಿಯೆ”
“ಅದೇನೂಂತ ಹೇಳು!”
“ಅದು ಇದು ಹೇಳು –
ಪಾಂಡವರ ಸತ್ಯವಾದರೆ – ಲೋಕದಲಿ
ಸ್ಥಿರಂಜಿಯಾಗಿ ನಿಲ್ಲಲಿ
ಪಾಂಡವರು ಅವರೇಂತ ಅವರೆಗಿಡ ನೋಡಿಕೊಂಡು

ಸತ್ಯವಂತರಾಗಿ ಬಾಳಲಿ – ಜನವೆಲ್ಲ
ಸತ್ಯವಂತರಾಗಿ ಬಾಳಲಿ" ।

ಶಕುನಿ ಹೇಳ್ತಾ ಇದ್ರೆ ದುರ್ಯೋದನ ಹಲ್‌ಹಲ್ ಕಡೀತವುನೆ
"ಅಪ್ಪಾ ಮಾರಾಜ ಹೇಳುದ್ರೆ ಹೇಳು, ಬುಟ್ರೆ ಬುಡು
ನಾನೇನೊ ನೀನು ಮ್ಯಾಲುಕ್ಕೆ ಬರ್ಲಿ ಅಂತ ಹಂಗೆ ಹೇಳ್ದೆ
ಬ್ಯಾಡಾ ಅನ್ನೋದಾದ್ರೆ ಅಲ್ಲೇ ಇರು!"
ದುರ್ಯೋದನ ಶಕುನಿಯ ಮನುಸ್ನಲ್ಲೆ ಬೋಯ್ತು ಅವನೆ
ಹೊರುಕ್ಕೆ ಬರ್ನೇಬೇಕಲ್ಲ
"ಮಾವ ಅದೇನು ಹೇಳು ಹೇಳ್ತೀನಿ"
"ಆಗ್ಲೆ ಹೇಳಿದ್ರೆ ಏನಾಯ್ತಿತ್ತಪ್ಪ ಹೋಗ್ಲಿ ಹೇಳು –

ಪಾಂಡವರ ಸತ್ಯವಾದರೆ – ಲೋಕದಲಿ
ಸ್ಥಿರಂಜಿಯಾಗಿ ನಿಲ್ಲಲಿ
ಪಾಂಡವರು ಅವರೇಂತ ಅವರೆಗಿಡ ನೋಡಿಕೊಂಡು
ಸತ್ಯವಂತರಾಗಿ ಬಾಳಲಿ – ಜನವೆಲ್ಲ
ಸತ್ಯವಂತರಾಗಿ ಬಾಳಲಿ" ।

ಶಕುನಿ ಹೇಳ್ಕೊಟ್ಟಂತೆ ದುರ್ಯೋದನ ಹೇಳ್ದ
ಆಗ ದುರ್ಯೋದುಂಗೆ ಪುಣ್ಯ ಪ್ರಾಪ್ತಿಯಾಗಿ
ಮಲಮೂತ್ರದ ಗುಂಡಿಯಿಂದ ಮೇಲುಕ್ಕೆ ಬಂದ
ಮೇಲಕ್ಕೆ ಬಂದಿದ್ರೂವೆ ಕ್ವೋಪ ಅಂದ್ರೆ ಅಂತಿಂತ ಕ್ವೋಪುವಲ್ಲ
ರಾಕ್ಷಕ್ವೋಪ ಬಂದು
ದಢದಢನೆ ಬಂದು ಶಕುನಿಯ ಝಾಡ್ಸಿ ಒದ್ದ

ಆ ಕೂಡಲೆ ಶಕುನಿ ನರಕದಿಂದ ಭೂಮಿಗೆ ದೊಪ್ಪನೆ ಬಿದ್ದ
ಆವತ್ತಿನಿಂದ ಭೂಮಿ ಮೇಲೆ ಶಕುನಿ ಸಂತಾನ ಹೆಂಗೋ

ಉಳುಕೊಂಡದೆ
ಕಲಿಂಗ ಕಳಿಯೋನ್ತನಕ
ಶಕುನಿ ಸಂತಾನ ಇದ್ದೇ ಇರ್ತದೆ.
ಶಕುನಿ ಬಿದ್ದ ಸ್ಥಳುವೆ ಈವತ್ತುನ
ಶಕುನೀಪುರ* ಅಂತಾಗದೆ
ಧರುಂರಾಯ್ರು ರೈತಬಾಂಧವರಿಗೆ ಕರವೆತ್ತಿ ಕೈಮುಗುದು
"ಅಪ್ಪ ಪ್ರಜೆಗಳೇ
ಅಣ್ಣತಮ್ಮೀರು ಜಗಳ ಆಡ್ಬೇಡಿ ೨೪೦

ತಂದೆ ತಾಯ್ಗಳ ನೋಯುಸ್ಬೇಡಿ
ಗುರುಹಿರಿಯರ ಮಾತ ಧಿಕ್ಕರಿಸಬೇಡಿ
ಸತ್ಯವನ್ನು ಬಿಡದೆ ಧರ್ಮವನ್ನು ಮರೀದೆ
ನ್ಯಾಯನೀತಿಯಿಂದ ನಡುದು
ಸುಖಶಾಂತಿ ಸಂತ್ರುಪ್ತಿಯಿಂದ ಬಾಳ್ರಪ್ಪ
ನಿಮುಗೆಲ್ಲ ಪರಮಾತ್ಮ ಒಳ್ಳೇದು ಮಾಡ್ಲಿ" ಅಂತ್ಹೇಳಿ–

ಎಲ್ಲರಿಗೂ ಕೈಯಮುಗುದು – ಪಾಂಡವರು
ಅಲ್ಲಿಂದ ಮುಂದುಕೊರಟರು
ಶ್ರೀ ಕೃಷ್ಣ ಪರಮಾತ್ಮ ನೀನೇ ಗತಿಯೆಂದು
ಮುಂದು ಮುಂದಕೆ ನಡೆದರು – ಪಾಂಡವರು
ಮುಂದು ಮುಂದಕೆ ನಡೆದರು । ೨೫೧

ಸಿದ್ದಶೆಟ್ಟರು ಹಾಡಿರುವ ಜನಪದ ಮಹಾಭಾರತ ಕುರಿತು ವಿದ್ವಾಂಸರ ಅಭಿಪ್ರಾಯಗಳು

೧. ಭಗೀರಥ ಸಾಹಸ

ಜಗತ್ತಿನ ಜನಪದ ಮಹಾಕಾವ್ಯಗಳ ಸಾಲಿನಲ್ಲಿ ಅಗ್ರಮಾನ್ಯತೆಗೆ ಪಾತ್ರವಾಗಿರುವ ಈ ಮಹಾಕೃತಿಯನ್ನು ಸಂಗ್ರಹಿಸಿ, ಸಂಪಾದಿಸಿ, ಸಮೀಕ್ಷಿಸಿ, ಪ್ರಕಟಿಸುವ ಮೂಲಕ ಡಾ.ರಾಜಶೇಖರ್ ಕನ್ನಡ ಭಾಷೆಗೆ ಹಾಗೂ ಕನ್ನಡ ಜನಪದ ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ವಿದ್ವಾಂಸರು ಈ ಕೃತಿಯನ್ನು, ನಾನಾ ಮುಖಗಳಿಂದ ಅಧ್ಯಯನ ಮಾಡುವುದಾದರೆ, ಇಲ್ಲಿಯ ಕಥನಮಾರ್ಗ, ಮಹಾಭಾರತ ಪರಂಪರೆ, ಸಮಕಾಲೀನ ಯುಗಧರ್ಮ, ಕೃಷಿ ಸಂಸ್ಕೃತಿ, ಛಂದಸ್ಸು, ಭಾಷೆ ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಕುತೂಹಲಕರವಾದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ಬೆಳಕು ಕಾಣುವ ಸಂಭವವುಂಟು. ರಾಜಶೇಖರ್ ಜಾನಪದದ ಸಂಪತ್ಸಮೃದ್ಧ ಗಣಿ. ಆ ಗಣಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಮೂಲಕ ಕರ್ತೃವಿನ ಭಗೀರಥ ಸಾಹಸವನ್ನು ಮೆಚ್ಚಬೇಕಾದ್ದು ನಿರಸೂಯ ಕನ್ನಡಿಗರ ಹಾಗೂ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಧರ್ಮ.

ದೇಜಗೌ

೨. ಯುಗನಿರ್ಮಾಣದ ಕೆಲಸ

'ಜನಪದ ಮಹಾಭಾರತ'ವನ್ನು ಅತ್ಯುತ್ತಮ ರೀತಿಯಲ್ಲಿ ಸಂಪಾದಿಸಿಕೊಡಲಾಗಿದೆ. ಕಲಾವಿದನ ಭಾಷೆ, ನಿರೂಪಣೆ ಮತ್ತು ಸಂಭಾಷಣೆಗಳೆಲ್ಲ ಇದರಲ್ಲಿ ಹಾಗೆಯೇ ಮೂರ್ತಗೊಂಡಿವೆ. ಶೈಕ್ಷಣಿಕ ಶಿಸ್ತು ಶಾಸ್ತ್ರೀಯತೆಗಳು ಕೃತಿಯುದ್ಧಕ್ಕೂ ಎದ್ದು ಕಾಣುತ್ತವೆ. ಕೃತಿಯ ಮೌಲಿಕತೆಯನ್ನು ಇವೆಲ್ಲವೂ ಕೂಡಿಯೇ ಹೆಚ್ಚಿಸಿವೆ. ಮೂಲ ಸೃಜನ ಕ್ರಿಯೆಯನ್ನು ಲಿಖಿತಗೊಳಿಸುವಲ್ಲಿ ಡಾ.ರಾಜಶೇಖರ ಅವರ ಪರಿಶ್ರಮ ಸಾರ್ಥಕವಾದುದು. ಕಲಾವಿದನ ಉಚ್ಚಾರ ಶೈಲಿ ಮತ್ತು ಅವನ ಮೇಲಾಗಿರುವ ಪ್ರಭಾವಗಳನ್ನು ಸುಲಭವಾಗಿ ಗುರುತಿಸಬಹುದಾದಷ್ಟು

ಸೂಕ್ಷ್ಮ ಸಂಪಾದನೆ ಅವರದು. ಜಾನಪದ ಸಂಬಂಧವಾದ ಭಾರತೀಯ ವಿದ್ವತ್ತು ಇಂತಹ ಕೃತಿಗಳ ಪ್ರಕಟಣೆಯಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಾಗಿದೆ. ಈ ದೃಷ್ಟಿಯಲ್ಲಿ ಇದೊಂದು 'ಯುಗ ನಿರ್ಮಾಣ' ಕೆಲಸ; ಉಜ್ವಲ ಪರಿಶೋಧನೆ (Brilliant Exploration) ಕೂಡ. ಕ್ಷೇತ್ರ ಕಾರ್ಯ ಸಹ ಒಂದು ಸಂಶೋಧನೆ ಎಂಬುದನ್ನು ಸಂಪಾದಕರು ಈ ಮೂಲಕ ತೋರಿಸಿಕೊಟ್ಟಿದ್ದಾರೆ. ಉತ್ಸಾಹ ಮತ್ತು ತಜ್ಞತೆಯಿಂದ ತಂದುಕೊಟ್ಟ ಒಂದು 'ಚಿರಸ್ಥಾಯಿ' (Monumental) ಕೊಡುಗೆ ಇದಾಗಿದೆ. ಈವರೆಗೆ ಕನ್ನಡದಲ್ಲಿ ಜನಪದ ಮಹಾಭಾರತಕ್ಕೆ ಸಂಬಂಧಿಸಿದಂತೆ ಕೆಲವೊಂದು ಬಿಡಿಭಾಗಗಳು ಮಾತ್ರ ಸಿಕ್ಕಿದ್ದವು. ಆದರೆ ಇದೇ ಮೊದಲ ಸಲ ಸಮರ್ಥವೂ, ಸಮರ್ಪಕವೂ ಆದ 'ಜನಪದ ಮಹಾಭಾರತ'ವೊಂದು ಪ್ರಕಟವಾಗುತ್ತಿದೆ.

ಕನ್ನಡ ಜಾನಪದ ಗ್ರಂಥ ಸಂಪಾದನೆಯ ದೃಷ್ಟಿಯಿಂದ ಡಾ.ರಾಜಶೇಖರ ಅವರ ಈ ಮಹಾಕಾವ್ಯ ನಡುನೆತ್ತಿಯಲ್ಲಿ ನಿಲ್ಲುವಂಥದು.

ಡಾ.ರಾಗೌ

೩. ದೇಸಿ ಸೊಗಡಿನ ಕಾವ್ಯ

ಪಂಪ, ನಾರಾಣಪ್ಪ, ಪಂಡಿತ ಮಂಡಳಿ ಇಂತಿಂಥ ಜನಪದರ ಬಾಯಿಜಗತ್ತಿನ ಪಾಮರ ಭಾರತವನ್ನು ಕೇಳಿ ನಿಬ್ಬೆರಗಾಗಿರಬೇಕು. ದೇಸಿಯಲ್ಲಿ ಕಾವ್ಯಮಾರ್ಗ ಹೆಣೆದುಕೊಂಡರೆ ಆಗ ಅದು ವಸಂತಮಾಸದಲ್ಲಿ ಮಾವು ಕೆಂಪು ತಳಿರು ತಳೆದು, ಹೂವಿನ ಹೊರೆ ಹೊದ್ದು, ತೂಗಿ ತೊನೆಯುತ್ತ, ತುಂಬಿ ಮೊರೆಯುತ್ತ, ಕೋಗಿಲೆ ಕೂಗುತ್ತ ಸುಗ್ಗಿ ಒಪ್ಪಿ ತೋರುವಂತೆ ಸೊಗಯಿಸುವುದೆಂದು ಪಂಪ ಹೇಳಿದ್ದು ಸತ್ಯಸ್ಯ ಸತ್ಯ ಕಣಾ ಎಂದೆನಿಸಿ ಅನುಭವವೇದ್ಯವಾಗುತ್ತದೆ, 'ಜನಪದ ಮಹಾಭಾರತ'ವನ್ನು ಪಾರಾಯಣ ಮಾಡಿದರೆ. ವ್ಯಾಸ ಪಂಪರ ಮಹಾಕಾವ್ಯಗಳಂತೆ ಇದು ಕೂಡ ಮತ್ತೆ ಮತ್ತೆ ಓದಿ ಚಿಂತನ ಮಂಥನ ಮನನ ಮಾಡಬೇಕಾದ ದೇಸೀ ಸೊಗಡಿನ ಮಹಾಕಾವ್ಯ. ಅಭಿನವ ವ್ಯಾಸ ಸಿದ್ದಸೆಟ್ಟಿಗೆ, ಅಭಿನವ

ಗಣಪ ರಾಜಶೇಖರಗೆ ಉಘೇ ಉಘೇ !

ಪ್ರೊ. ಹಂಪ ನಾಗರಾಜಯ್ಯ

೪. ಕ್ಷೇತ್ರಕಾರ್ಯದ ಮಹಾಘನ

ಮಹಾಭಾರತದ ವಿವಿಧ ಕಥಾಂತರಗಳನ್ನು, ಹೊಸ ಅರಿವನ್ನು ಉಂಟುಮಾಡುವ ಈ ಕೃತಿಯನ್ನು ಅವರು ಸಂಗ್ರಹಿಸದಿದ್ದಲ್ಲಿ ಆಗುತ್ತಿದ್ದ ನಷ್ಟ ಅಪಾರ. ಅವರಿಗೆ ಕಾವ್ಯಾಸಕ್ತರು ಚಿರಋಣಿಗಳಾಗಿರಬೇಕು. ಅವರು ನಮ್ಮ ಜಾನಪದ ಕ್ಷೇತ್ರದ ಒಂಟಿ ಸಲಗ. ಅವರ ಪ್ರಸ್ತುತ ಜನಪದ ಮಹಾಭಾರತ ಅವರ ಕ್ಷೇತ್ರ ಕಾರ್ಯದ ಮಹಾಘನ.

ಡಾ.ಎನ್.ಎಸ್.ತಾರಾನಾಥ

೫. ಮೌಖಿಕ ಸಂಪ್ರದಾಯದ ಅಭೂತಪೂರ್ವ ಶಕ್ತಿ

ಇಡೀ ಕಾವ್ಯವನ್ನು ಒಬ್ಬರೇ ಸತತವಾಗಿ ಹಾಡಿದ್ದಾರೆ ಎಂಬ ಮಾತು ಮೌಖಿಕ ಸಂಪ್ರದಾಯದ ಅಭೂತಪೂರ್ವ ಶಕ್ತಿಯನ್ನು ಮತ್ತೊಮ್ಮೆ ಸಾಬೀತುಪಡಿಸುವುದರ ಜೊತೆಗೆ ಎಲ್ಲದಕ್ಕೂ ಅಕ್ಷರದ ಆಕರಗಳನ್ನು ಆಧರಿಸುವ ನಮ್ಮಂಥ ಅಕ್ಷರದ ಅಹಮಿಕೆಗಳಿಗೆ, ಮರೆಗುಳಿಗಳಿಗೆ ಚುಚ್ಚುಮದ್ದೂ ಆಗುತ್ತದೆ. ಜನಪದರ ಎಲ್ಲಾ ರೀತಿಯ ಅಬಿವ್ಯಕ್ತಿ ಶೈಲಿ, ಭಾಷೆಯ ನುಡಿಗಟ್ಟು, ಭಿನ್ನ ಕಥನಕ್ರಮವನ್ನುಳ್ಳ ಈ ಕೃತಿ ನಿಜವಾದ ಜನಪದರ ಭಾರತ. ಈ ಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ಮೂಲಭಾರತ ಮತ್ತು ಕನ್ನಡ ಭಾರತಗಳನ್ನು ತೌಲನಿಕ ಅಧ್ಯಯನ ಮತ್ತು ವಿಶ್ಲೇಷಣೆಗೆ ಒಳಪಡಿಸುವ ಕೆಲಸ ಆಗಬೇಕಾಗಿದೆ.

ಜನಪದ ಮಹಾಕಾವ್ಯಗಳ ಮಹಾಸಂಪಾದಕ ಡಾ.ಪಿ.ಕೆ.ರಾಜಶೇಖರ ಅವರಿಗೆ ಕೃತಜ್ಞತೆಗಳು.

ಪ್ರೊ. ಲಿಂಗದೇವರು ಹಳೆಮನೆ

ನೀಲಗಾರ ಪರಂಪರೆಗೆ ಸೇರಿದ ಕನ್ನಡ ನಾಡಿನ ಅತ್ಯುತ್ತಮ ವೃತ್ತಿ ಗಾಯಕರಲ್ಲಿ ಒಬ್ಬರಾದ ಬೆಟ್ಟದಬೀಡು ಸಿದ್ಧಶೆಟ್ಟರು ಅನುಭಾವಿ ಸಂತ. ಉದ್ಧೂರಿನ ಮಾದಪ್ಪಶೆಟ್ಟರ ಮೆಚ್ಚಿನ ಶಿಶುಮಗನಾಗಿ ಬದುಕು ರೂಪಿಸಿಕೊಂಡ ಸಿದ್ಧಶೆಟ್ಟರು 'ಜನಪದ ಮಹಾಭಾರತ' ಬೃಹತ್ ಮೌಖಿಕ ಕಾವ್ಯವನ್ನು ಕನ್ನಡ ನಾಡಿಗೆ ಉಳಿಸಿಕೊಟ್ಟು ಜನಪದ ವ್ಯಾಸರಾಗಿ ಬಿರುದಾಂಕಿತರಾದರು. ಸಿದ್ಧಶೆಟ್ಟರ ಬದುಕು-ಸಾಧನೆಗಳನ್ನು ಅತ್ಯಂತ ಮಾನವೀಯ ನೆಲೆಯಲ್ಲಿ ಕಟ್ಟಿಕೊಟ್ಟಿರುವ ಪಿ.ಕೆ.ರಾಜಶೇಖರ ಅವರ ಬರವಣಿಗೆಯು ಎಂತಹವರ ಮನಸ್ಸನ್ನು ಆರ್ದ್ರಗೊಳಿಸುತ್ತದೆ.

– ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೦೦೫೪